# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 621**

**ಉತ್ತರಿಸಬೇಕಾದ ದಿನಾಂಕ : 20.02.2024**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಯಶಸ್ವಿನಿ ಯೋಜನೆಯು ಪ್ರಸ್ತುತ ಚಾಲ್ತಿಯಲ್ಲಿದೆಯೇ: ಈ ಯೋಜನೆಯಡಿ ಸೌಲಭ್ಯಗಳನ್ನು ಪಡೆಯಲು ಇರುವ ಮಾನದಂಡಗಳೇನು; (ವಿವರ ನೀಡುವುದು) | ರಾಜ್ಯದಲ್ಲಿ 2022-23ನೇ ಸಾಲಿನಿಂದ ಪರಿಷ್ಕೃತ ಯಶಸ್ವಿನಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಪ್ರಸಕ್ತ 2023-24ನೇ ಸಾಲಿಗೆ ಈ ಯೋಜನೆಯನ್ನು ಮುಂದುವರೆಸಲಾಗಿದೆ.<br><br>ಈ ಯೋಜನೆಯ ಸೌಲಭ್ಯ ಪಡೆಯಲು ಇರುವ ಮಾನದಂಡಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಈ ಯೋಜನೆಯಡಿ ಸಾರ್ವಜನಿಕರು ಹೊಸದಾಗಿ ನೋಂದಣಿಯನ್ನು ಎಲ್ಲಿ ಮಾಡಿಕೊಳ್ಳಬೇಕು: ಯಶಸ್ವಿನಿ ಕಾರ್ಡ್ ವಿತರಿಸುವ ಪ್ರಾಧಿಕಾರ ಯಾವುದು; (ಸಂಪೂರ್ಣ ಮಾಹಿತಿ ನೀಡುವುದು) | ಯಶಸ್ವಿನಿ ಯೋಜನೆಯಡಿ ಸಹಕಾರ ಸಂಘಗಳ ಸದಸ್ಯರು ತಾವು ಸದಸ್ಯರಾಗಿರುವ ಯಾವುದೇ ಸಹಕಾರ ಸಂಘವನ್ನು ಸಂಪರ್ಕಿಸಿ ಯಶಸ್ವಿನಿ ಯೋಜನೆ ನೋಂದಣಿ ಅರ್ಜಿಯನ್ನು ಭರ್ತಿ ಮಾಡಿ, ನಿಗದಿತ ವಂತಿಗೆ ಮೊತ್ತವನ್ನು ಪಾವತಿಸಿ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಯಶಸ್ವಿನಿ ಕಾರ್ಡ್‌ನ್ನು ಯಶಸ್ವಿನಿ ಟ್ರಸ್ಟ್ ಮೂಲಕ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರ ಮುಖಾಂತರ ಸಹಕಾರ ಸಂಘಗಳಿಗೆ ವಿತರಿಸಲಾಗುವುದು. |
| ಇ) | ಸಹಕಾರಿ ಸಂಸ್ಥೆಗಳ ಎಲ್ಲಾ ಸದಸ್ಯರನ್ನು ನೋಂದಣಿ ಮಾಡಲು ಏನು ಕ್ರಮವಹಿಸಲಾಗಿದೆ: ಇನ್ನು ಎಷ್ಟು ಸಂಖ್ಯೆಯ ಸಹಕಾರಿ ಸಂಸ್ಥೆಗಳ ಸದಸ್ಯರು ಯಶಸ್ವಿನಿ ಯೋಜನೆಯ ನೋಂದಾವಣೆಗೆ ಬಾಕಿ ಇರುತ್ತಾರೆ. ಬಾಕಿ ಇರಲು ಕಾರಣಗಳೇನು: ಅವರಿಗೆ ಈ ಕುರಿತು ತಿಳುವಳಿಕೆ ಪತ್ರ ನೀಡಲಾಗಿದೆಯೇ: (ವಿವರ ಒದಗಿಸುವುದು) | ಸಹಕಾರ ಸಂಘಗಳ ಎಲ್ಲಾ ಸದಸ್ಯರನ್ನು ಯಶಸ್ವಿನಿ ಯೋಜನೆಯಡಿ ನೋಂದಣಿ ಮಾಡಿಕೊಳ್ಳಲು ವಿವಿಧ ಮಾಧ್ಯಮಗಳ ಮೂಲಕ ಯೋಜನೆ ಬಗ್ಗೆ ವ್ಯಾಪಕ ಪ್ರಚಾರ ಕೈಗೊಂಡಿದ್ದು, ಈ ನಿಟ್ಟಿನಲ್ಲಿ ಡಿಸಿಸಿ ಬ್ಯಾಂಕುಗಳು, ಹಾಲು ಒಕ್ಕೂಟದ ಶಿಬಿರಗಳಲ್ಲಿ ಹಾಗೂ ಸಹಕಾರ ಇಲಾಖೆ ಕಛೇರಿಗಳಲ್ಲಿ ಮತ್ತು ವಿವಿಧ ಸಹಕಾರ ಸಂಘ-ಸಂಸ್ಥೆಗಳಲ್ಲಿ ಭಿತ್ತಿ ಪತ್ರ, ಪೋಸ್ಟರ್ ಅಂಟಿಸಿ ವ್ಯಾಪಕ ಪ್ರಚಾರ ಮಾಡುವ ಮೂಲಕ ಸದಸ್ಯರ ನೋಂದಣಿ ಮಾಡಲು ಕ್ರಮವಿಡಲಾಗುತ್ತಿದೆ.<br><br>ಇದಲ್ಲದೇ, ನಾಲ್ಕು ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರ ಕಛೇರಿಗಳಲ್ಲಿ, ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿಗಳಲ್ಲಿ ತರಬೇತಿ ಶಿಬಿರಗಳು, ಕಾರ್ಯಾಗಾರಗಳನ್ನು ನಡೆಸುವುದರ ಮೂಲಕ ಯೋಜನೆ ಬಗ್ಗೆ ಅರಿವು ಮೂಡಿಸಲಾಗಿದೆ. |

| | | |
|---|---|---|
| | | 2022-23ನೇ ಸಾಲಿನಲ್ಲಿ ರಾಜ್ಯದಲ್ಲಿ 30 ಲಕ್ಷ ಸದಸ್ಯರನ್ನು ನೋಂದಣಿ ಮಾಡಲು ಗುರಿ ನಿಗದಿಪಡಿಸಲಾಗಿತ್ತು. ಆದರೆ ಇಲಾಖೆಯು ಕೈಗೊಂಡ ಕ್ರಮಗಳಿಂದ ರಾಜ್ಯದಲ್ಲಿ ಸುಮಾರು 20,500 ಸಹಕಾರ ಸಂಘಗಳಿಂದ 13.29 ಲಕ್ಷ ಸಹಕಾರಿ ಕುಟುಂಬಗಳ ಒಟ್ಟು 48.24 ಲಕ್ಷ ಸದಸ್ಯರನ್ನು ಯೋಜನೆಯಲ್ಲಿ ನೋಂದಣಿ ಮಾಡಿಸಲಾಗಿದೆ.<br><br>ರಾಜ್ಯದಲ್ಲಿ ಇನ್ನು ಸುಮಾರು 6 ಸಾವಿರ ಅರ್ಹ ಸಹಕಾರ ಸಂಘಗಳು ಯಶಸ್ವಿನಿ ಯೋಜನೆಯಡಿ ಸದಸ್ಯರನ್ನು ನೋಂದಣಿ ಮಾಡಿಸಿಕೊಳ್ಳಲು ಅವಕಾಶವಿದೆ.<br><br>ಯಶಸ್ವಿನಿ ಯೋಜನೆಯಡಿ ಸದಸ್ಯರು ಸ್ವಯಂ ಪ್ರೇರಣೆಯಿಂದ ವಾರ್ಷಿಕ ವಂತಿಗೆ ಪಾವತಿಸಿ ಸದಸ್ಯರಾಗಬೇಕಾಗಿದ್ದು, ಯೋಜನೆಯಲ್ಲಿ ಸದಸ್ಯರಾಗಲು ಇಚ್ಛಿಸದವರನ್ನು ಒತ್ತಾಯ ಮಾಡಲಾಗುವುದಿಲ್ಲ.<br><br>ಸರ್ಕಾರಿ ನೌಕರರು, ಮಾಸಿಕ ರೂ.30,000 ಕ್ಕಿಂತ ಹೆಚ್ಚಿನ ವೇತನ ಪಡೆಯುವ ಖಾಸಗಿ ಸಂಸ್ಥೆಗಳ ನೌಕರರು, ಇತರೆ ವಿಮಾ ಯೋಜನೆಗಳನ್ನು ಪಡೆದಿರುವ ಸದಸ್ಯರು, ನೌಕರರ ಸಹಕಾರ ಸಂಘಗಳ ಸದಸ್ಯರು ಮತ್ತು ಫೆಡರಲ್ ಸಹಕಾರ ಸಂಸ್ಥೆಗಳ ಸದಸ್ಯರು ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.<br><br>ಕೆಲವು ಬಿಪಿಎಲ್ ಕಾರ್ಡುದಾರರು ಆಯುಷ್ಮಾನ್ ಭಾರತ್ ಯೋಜನೆಯಲ್ಲಿ ಕಾರ್ಡ್ ಪಡೆದಿರುವುದರಿಂದ ಮತ್ತು ಯಶಸ್ವಿನಿ ಯೋಜನೆಯಲ್ಲಿ ವಂತಿಗೆ ಪಾವತಿಸಬೇಕಾಗಿರುವುದರಿಂದ ಯಶಸ್ವಿನಿ ಕಾರ್ಡ್ ಪಡೆಯಲು ಮುಂದೆ ಬರುತ್ತಿಲ್ಲ.<br><br>2023-24ನೇ ಸಾಲಿಗೆ 50 ಲಕ್ಷ ಸದಸ್ಯರನ್ನು ನೋಂದಾಯಿಸಲು ಸರ್ಕಾರವು ಗುರಿ ನಿಗದಿಪಡಿಸಿಕೊಂಡಿದ್ದು ನೋಂದಣಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| ಈ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಯಶಸ್ವಿನಿ ಯೋಜನೆಯಡಿ ಆಸ್ಪತ್ರೆಗಳಿಗೆ ಚಿಕಿತ್ಸಾ ವೆಚ್ಚವನ್ನು ಸರ್ಕಾರದಿಂದ ಭರಿಸಲು ಬಾಕಿಯಿರುವ ಪ್ರಕರಣಗಳೆಷ್ಟು: ಬಾಕಿ ಇರುವ ಮೊತ್ತವೆಷ್ಟು: (ಆಸ್ಪತ್ರೆವಾರು ಸಂಪೂರ್ಣ ಮಾಹಿತಿ ನೀಡುವುದು) | ಹಿಂದಿನ ಯಶಸ್ವಿನಿ ಯೋಜನಾವಧಿಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 21 ಆಸ್ಪತ್ರೆಗಳಿಗೆ 120 ಪ್ರಕರಣಗಳಲ್ಲಿ ರೂ.34.95 ಲಕ್ಷಗಳು ಮತ್ತು ಉಡುಪಿ ಜಿಲ್ಲೆಯಲ್ಲಿ ಒಟ್ಟು 16 ಆಸ್ಪತ್ರೆಗಳಿಗೆ 112 ಪ್ರಕರಣಗಳಲ್ಲಿ ರೂ.23.87 ಲಕ್ಷ ಚಿಕಿತ್ಸಾ ವೆಚ್ಚಗಳಿಗೆ ಸಂಬಂಧಿಸಿದ ಕ್ಲೇಂ ಬಿಲ್ಲುಗಳನ್ನು ಆಸ್ಪತ್ರೆಗಳು ನಿಯಮಾನುಸಾರ ಸಲ್ಲಿಸದಿರುವುದು, ಅಗತ್ಯ ದಾಖಲೆಗಳನ್ನು ಸಲ್ಲಿಸದಿರುವುದು ಮತ್ತು ನಿಗದಿತ ಅವಧಿಯೊಳಗೆ |

| | | |
|---|---|---|
| | | ಸಲ್ಲಿಸದಿರುವುದು ಮುಂತಾದ ಕಾರಣಗಳಿಂದಾಗಿ ಸದರಿ ಬಿಲ್ಲುಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಟಿಪಿಎ ಸಂಸ್ಥೆಯಾದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಪರಿಶೀಲಿಸಿ ಸದರಿ ಕ್ಲೇಂ ಬಿಲ್ಲುಗಳನ್ನು ಅನರ್ಹವೆಂದು ತಿರಸ್ಕರಿಸಿರುವುದು ದಾಖಲೆಗಳಿಂದ ಕಂಡು ಬರುತ್ತದೆ. ಬಿಲ್ಲುಗಳು ನಿಯಮಾನುಸಾರ ಇಲ್ಲದಿರುವ ಕಾರಣದಿಂದ ತಿರಸ್ಕೃತಗೊಂಡಿದ್ದು, ಬಾಕಿ ಪಾವತಿ ಕ್ರಮ ಉದ್ಭವಿಸುವುದಿಲ್ಲ.<br><br>ತಿರಸ್ಕೃತಗೊಂಡಿರುವ ಬಿಲ್ಲುಗಳ ಆಸ್ಪತ್ರೆವಾರು ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಉ) | ಯಶಸ್ವಿನಿ ಯೋಜನೆಯಡಿ ಚಿಕಿತ್ಸೆ ಪಡೆದ ಸಾರ್ವಜನಿಕರ ಚಿಕಿತ್ಸಾ ವೆಚ್ಚವನ್ನು ಸರ್ಕಾರವು ಭರಿಸದಿರುವುದರಿಂದ ಉಭಯ ಜಿಲ್ಲೆಗಳ ಅನೇಕ ಆಸ್ಪತ್ರೆಗಳಲ್ಲಿ ಈ ಯೋಜನೆಯಡಿ ಫಲಾನುಭವಿಗಳಿಗೆ ಚಿಕಿತ್ಸೆ ನೀಡಲು ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಿಂದ ಬಡತನ ರೇಖೆಗಿಂತ ಕೆಳಗಿರುವ ಅನೇಕ ಕುಟುಂಬಗಳಿಗೆ ತೊಂದರೆಯಾಗಿದ್ದು, ಯಾವಾಗ ಈ ಸಮಸ್ಯೆಯನ್ನು ಬಗೆಹರಿಸಲಾಗುವುದು; ಈ ಕುರಿತು ಸರ್ಕಾರವು ಸಂಬಂಧಪಟ್ಟವರಿಗೆ ಅಗತ್ಯ ಸೂಚನೆ ನೀಡುವುದೆ? (ವಿವರ ನೀಡುವುದು) | ಪರಿಷ್ಕೃತ ಯಶಸ್ವಿನಿ ಯೋಜನೆ 2022-23ನೇ ಸಾಲಿನ ಪ್ರಾರಂಭಿಕ ಅವಧಿಯಲ್ಲಿ ಕೆಲವು ಆಸ್ಪತ್ರೆಗಳು ಯೋಜನೆಯಲ್ಲಿ ಚಿಕಿತ್ಸೆಗಳಿಗೆ ನಿಗದಿಪಡಿಸಿರುವ ದರಗಳು ಕಡಿಮೆ ಇದೆ ಎಂದು ಮತ್ತು ಹಿಂದಿನ ಹಳೆಯ ಯಶಸ್ವಿನಿ ಯೋಜನಾ ಅವಧಿಯ ಬಿಲ್ಲುಗಳು ಬಾಕಿ ಇದೆ ಎಂದು ತಿಳಿಸಿ, ಪರಿಷ್ಕೃತ ಯಶಸ್ವಿನಿ ಯೋಜನೆಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಸೇರಿದಂತೆ ರಾಜ್ಯಾದ್ಯಂತ ಹಲವು ಆಸ್ಪತ್ರೆಗಳು ಯಶಸ್ವಿನಿ ಯೋಜನೆಯಲ್ಲಿ ನೋಂದಣಿ ಮಾಡಿಕೊಳ್ಳಲು ಮುಂದೆ ಬಂದಿರುವುದಿಲ್ಲ.<br><br>ಈ ಮಧ್ಯೆ ಸರ್ಕಾರವು ಯಶಸ್ವಿನಿ ಯೋಜನೆಯ ಚಿಕಿತ್ಸೆಗಳ ಪೈಕಿ 206 ಚಿಕಿತ್ಸೆ/ಶಸ್ತ್ರ ಚಿಕಿತ್ಸೆ ದರಗಳನ್ನು ಹೆಚ್ಚಿಗೆ ಮಾಡಿದ್ದರಿಂದ ಹಿಂದೆ ಸರಿದಿದ್ದ ಅನೇಕ ಆಸ್ಪತ್ರೆಗಳು ಯಶಸ್ವಿನಿ ಯೋಜನೆಯಲ್ಲಿ ನೋಂದಣಿ ಮಾಡಿಕೊಳ್ಳಲು ಮುಂದೆ ಬಂದಿರುತ್ತವೆ.<br><br>ಹಿಂದಿನ ಯೋಜನಾ ಅವಧಿಯಲ್ಲಿ ಕೆಲವು ಆಸ್ಪತ್ರೆಗಳು ಕ್ಲೇಂ ಬಿಲ್ಲುಗಳನ್ನು ನಿಯಮಾನುಸಾರ ಸಲ್ಲಿಸದಿರುವುದು, ನಿಯಮಾನುಸಾರ ಸಲ್ಲಿಸಲೇಬೇಕಾದ ಅಗತ್ಯ ದಾಖಲೆಗಳನ್ನು ಸಲ್ಲಿಸದಿರುವುದು ಮತ್ತು ನಿಗದಿತ ಅವಧಿಯೊಳಗೆ ಆಸ್ಪತ್ರೆಗಳ ಬಿಲ್ಲುಗಳನ್ನು ಸಲ್ಲಿಸದಿರುವ ಕಾರಣ ಅಂತಹ ಆಸ್ಪತ್ರೆಗಳ ಬಿಲ್ಲುಗಳನ್ನು ತಿರಸ್ಕರಿಸಿರುವುದು ದಾಖಲೆಗಳಿಂದ ಕಂಡು ಬಂದಿರುತ್ತದೆ.<br><br>ನಿಯಮಾನುಸಾರ ಸಲ್ಲಿಕೆಯಾಗಿರುವ ಎಲ್ಲಾ ಆಸ್ಪತ್ರೆಗಳ ಬಿಲ್ಲುಗಳನ್ನು ಕಾಲಕಾಲಕ್ಕೆ ಈ ಹಿಂದೆಯೇ ಪಾವತಿಸಿದ್ದು, ನಿಯಮಾನುಸಾರ ಇಲ್ಲದಿರುವ ಬಿಲ್ಲುಗಳು ಮಾತ್ರ ತಿರಸ್ಕೃತಗೊಂಡಿರುತ್ತವೆ.<br><br>ಹಿಂದಿನ ಯಶಸ್ವಿನಿ ಯೋಜನೆಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕ್ರಮವಾಗಿ 31 ಮತ್ತು 23 ಆಸ್ಪತ್ರೆಗಳು ನೋಂದಣಿ ಮಾಡಿಕೊಂಡಿದ್ದವು. ವಿವರಗಳನ್ನು **ಅನುಬಂಧ – 2ಎ** ರಲ್ಲಿ ನೀಡಲಾಗಿದೆ. |

| | | |
|---|---|---|
| | | ಪರಿಷ್ಕೃತ ಯಶಸ್ವಿನಿ ಯೋಜನೆಯಡಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕ್ರಮವಾಗಿ 18 ಮತ್ತು 14 ಆಸ್ಪತ್ರೆಗಳು ನೋಂದಣಿ ಮಾಡಿಕೊಂಡಿರುತ್ತವೆ.<br><br>ವಿವರಗಳನ್ನು **ಅನುಬಂಧ-2ಬಿ** ರಲ್ಲಿ ನೀಡಲಾಗಿದೆ.<br><br>ಈಗಿನ ಯಶಸ್ವಿನಿ ಯೋಜನೆಯಲ್ಲಿ ಈ ಉಭಯ ಜಿಲ್ಲೆಗಳಲ್ಲಿ ನೋಂದಣಿ ಮಾಡಿಕೊಂಡಿರುವ ಎಲ್ಲಾ ಆಸ್ಪತ್ರೆಗಳು ಈ ಹಿಂದಿನ ಯೋಜನಾ ಅವಧಿಯಲ್ಲಿ ನೋಂದಣಿ ಮಾಡಿಕೊಂಡಿರುವ ಆಸ್ಪತ್ರೆಗಳೇ ಆಗಿರುತ್ತವೆ. ಆದರೂ, ಈ ಉಭಯ ಜಿಲ್ಲೆಗಳ ಕೆಲವು ಪ್ರಮುಖ ಆಸ್ಪತ್ರೆಗಳು ಮೇಲೆ ತಿಳಿಸಿರುವ ಕಾರಣಗಳಿಗಾಗಿ ಯೋಜನೆಗೆ ಸೇರಿಕೊಳ್ಳಲು ನಿರಾಸಕ್ತಿ ಹೊಂದಿ ನೆಟ್‌ವರ್ಕ್ ಆಸ್ಪತ್ರೆಗಳಾಗಿ ನೋಂದಣಿ ಮಾಡಿಕೊಳ್ಳಲು ಮುಂದೆ ಬರುತ್ತಿಲ್ಲ. ಈ ಆಸ್ಪತ್ರೆಗಳನ್ನು ಯೋಜನೆಯಡಿ ಸೇರಿಸಿಕೊಳ್ಳಲು ಮನವೊಲಿಸುವ ಪ್ರಯತ್ನಗಳನ್ನು ಇಲಾಖೆಯಿಂದ ನಿರಂತರವಾಗಿ ನಡೆಸಲಾಗುತ್ತಿದೆ. |

**ಸಂಖ್ಯೆ: ಸಿಒ 28 ಸಿಎಲ್ಎಸ್ 2024**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು

# .ಅನುಬಂಧ – 1

## ರೂಪು ರೇಷೆಗಳು/ಮಾನದಂಡಗಳು (2023-24)

**ಸದಸ್ಯರಾಗಿ ನೋಂದಾಯಿಸಿಕೊಳ್ಳಲು ಅರ್ಹತೆಗಳು :**

1. ಯಾವುದೇ ಸಹಕಾರ ಸಂಘದ ಕಾಯ್ದೆಯಡಿ ನೋಂದಾಯಿಸಿಕೊಂಡು ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಹಕಾರ ಸಂಘದ (ಸೌಹಾರ್ದ, ಬಹುರಾಜ್ಯ ಕಾಯ್ದೆ, ಗ್ರಾಮೀಣ ಮತ್ತು ನಗರ ಸಹಕಾರ ಸಂಘಗಳು ಒಳಗೊಂಡಂತೆ) ಖಾಯಂ ಸದಸ್ಯರು, (ಸಹ ಸದಸ್ಯರು, ನಾಮ ಮಾತ್ರ ಸದಸ್ಯರಿಗೆ ಅವಕಾಶವಿರುವುದಿಲ್ಲ) ಸಹಕಾರಿ ಸ್ವ-ಸಹಾಯ ಗುಂಪುಗಳ ಸದಸ್ಯರು ಸದಸ್ಯರಾಗಿ ಮೂರು ತಿಂಗಳು ಪೂರ್ಣಗೊಂಡಿದ್ದಲ್ಲಿ ಅಂತಹ ಸದಸ್ಯರು ಮತ್ತು ಅವರ ಅರ್ಹ ಕುಟುಂಬ ಸದಸ್ಯರು ನಿಗದಿ ಪಡಿಸಿದ ವಾರ್ಷಿಕ ವಂತಿಗೆಯನ್ನು ಪಾವತಿಸಿ ಯಾವುದೇ ವಯೋಮಿತಿ ನಿರ್ಬಂಧ ವಿಲ್ಲದೇ ಯಶಸ್ವಿನಿ ಯೋಜನೆಯಡಿ ಸದಸ್ಯರಾಗಿ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

2. 2023-24ನೇ ಸಾಲಿಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿ ನೋಂದಣಿಯಾಗಿ ಕಾರ್ಯನಿರತ ಸಹಕಾರ ಸಂಘಗಳಲ್ಲಿ ಕನಿಷ್ಠ ಮೂರು ವರ್ಷ ಸೇವೆ ಪೂರ್ಣಗೊಳಿಸಿ ಮಾಸಿಕ ೧

3. ೂ.30,000/- ಮತ್ತು ಅದಕ್ಕಿಂತ ಕಡಿಮೆ ಒಟ್ಟು ವೇತನ ಪಡೆಯುತ್ತಿರುವ ಸಹಕಾರ ಸಂಘದ ನೌಕರರು ಮತ್ತು ಅವರ ಅರ್ಹ ಕುಟುಂಬ ಸದಸ್ಯರು ಯಶಸ್ವಿನಿ ಯೋಜನೆಯಡಿ ಸದಸ್ಯರಾಗಲು ಮತ್ತು ಸೌಲಭ್ಯ ಪಡೆಯಲು ಸರ್ಕಾರವು ಅವಕಾಶ ಕಲ್ಪಿಸಿದೆ. (ಮೂರು ವರ್ಷ ಸೇವೆ ಮತ್ತು ರೂ.30,000/- ಮತ್ತು ಅದಕ್ಕಿಂತ ಕಡಿಮೆ ಒಟ್ಟು ವೇತನ ಪಡೆಯುತ್ತಿರುವ ಬಗ್ಗೆ ಸಹಕಾರ ಸಂಘದ ಆಡಳಿತ ಮಂಡಳಿ ಅನುಮೋದನೆ ದೃಢೀಕರಣ ಪತ್ರ ಲಗತ್ತಿಸಬೇಕು)

4. ಸಮಾಪನೆಗೊಂಡಿರುವ ಮತ್ತು ನಿಷ್ಕ್ರಿಯಗೊಂಡಿರುವ ಸಹಕಾರ ಸಂಘಗಳು ಹಾಗೂ ನೌಕರರ ಸಹಕಾರ ಸಂಘಗಳ ಸದಸ್ಯರಿಗೆ (ನೌಕರರ ಪತ್ತಿನ ಸಹಕಾರ ಸಂಘಗಳು, ನೌಕರರ ಸಹಕಾರ ಬ್ಯಾಂಕುಗಳು, ನೌಕರರ ಗೃಹ ನಿರ್ಮಾಣ ಸಹಕಾರ ಸಂಘಗಳೂ ಸೇರಿದಂತೆ) ಈ ಯೋಜನೆ ಅನ್ವಯಿಸುವುದಿಲ್ಲ. ಪ್ರಧಾನ ಅರ್ಜಿದಾರರು ಮತ್ತು ಅವನ ಕುಟುಂಬದ ಯಾವುದೇ ಸದಸ್ಯನು ಸರ್ಕಾರಿ ನೌಕರರಾಗಿದ್ದಲ್ಲಿ ಯೋಜನೆಗೆ ಅರ್ಹರಿರುವುದಿಲ್ಲ. ಅದೇ ರೀತಿ ಒಬ್ಬ ವ್ಯಕ್ತಿ ಖಾಸಗಿ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಮಾಸಿಕ ರೂ.30,000/- ಕ್ಕಿಂತ ಹೆಚ್ಚು ಒಟ್ಟು ವೇತನ ಪಡೆಯುತ್ತಿದ್ದಲ್ಲಿ ಅಥವಾ ಒಬ್ಬ ವ್ಯಕ್ತಿ ಬೇರೆ ಯಾವುದೇ ಆರೋಗ್ಯ ವಿಮಾ ಯೋಜನೆಯಡಿಯಲ್ಲಿ ಸದಸ್ಯರಾಗಿದ್ದಲ್ಲಿ ಅಂತಹವರು ಯಶಸ್ವಿನಿ ಯೋಜನೆಯಡಿ ಸದಸ್ಯರಾಗಲು ಅರ್ಹರಿರುವುದಿಲ್ಲ. ಅಂತಹವರನ್ನು ಯಶಸ್ವಿನಿ ಯೋಜನೆಯ ಫಲಾನುಭವಿಯಾಗಿ ನೊಂದಾಯಿಸಬಾರದು. ಆದಾಗ್ಯೂ ಯಾವುದೇ ಕಾರಣಕ್ಕೆ ನೊಂದಾಯಿಸಿದಲ್ಲಿ ಅವರು ಯೋಜನೆ ಸೌಲಭ್ಯ ಪಡೆಯಲು ಅರ್ಹರಾಗುವುದಿಲ್ಲ. ಅಲ್ಲದೇ ಅಂತಹ ವ್ಯಕ್ತಿಗಳು ಪಾವತಿಸಿದ ವಂತಿಗೆಯನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಗುವುದು.

5. ಯಶಸ್ವಿನಿ ಯೋಜನೆಯಲ್ಲಿನ ವ್ಯಾಖ್ಯಾನದಂತೆ "ಕುಟುಂಬ" ಎಂದರೆ ಪ್ರಧಾನ ಅರ್ಜಿದಾರರ (Principal Member) ತಂದೆ, ತಾಯಿ, ಗಂಡ/ಹೆಂಡತಿ, ಗಂಡು ಮಕ್ಕಳು ಮದುವೆಯಾಗದ ಹೆಣ್ಣು ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು (ಗಂಡು ಮಕ್ಕಳ ಮಕ್ಕಳು) ಎಂದು ಅರ್ಥೈಯಿಸುವುದು. ಒಂದು ಮನೆಯಲ್ಲಿ ಸೊಸೆ ಪ್ರಧಾನ ಅರ್ಜಿದಾರರಾಗಿದ್ದಲ್ಲಿ ಅವರ ಗಂಡನ ತಂದೆ/ತಾಯಿ ಅಂದರೆ ಅರ್ಜಿದಾರರ ಅತ್ತೆ/ಮಾವ ಅರ್ಹ ಸದಸ್ಯರಾಗುತ್ತಾರೆ. ಆದರೆ ಅರ್ಜಿದಾರರ ತಂದೆ/ತಾಯಿಯವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಬರುವುದಿಲ್ಲ.

6. ಒಬ್ಬ ಯಶಸ್ವಿನಿ ಸದಸ್ಯ ಒಂದು ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ಅವಿಭಕ್ತ ಕುಟುಂಬದ ಎಲ್ಲಾ ಸದಸ್ಯರಿಗೆ ಒಂದೇ ರೇಷನ್ ಕಾರ್ಡು ಹೊಂದಿದ್ದು, ಅದನ್ನು ಹಾಜರು ಪಡಿಸಿದಲ್ಲಿ ಅಂತಹ ರೇಷನ್ ಕಾರ್ಡ್‌ನಲ್ಲಿ ಹೆಸರು ನಮೂದಾಗಿರುವ ಅವಿಭಕ್ತ ಕುಟುಂಬದ ಎಲ್ಲಾ ಸದಸ್ಯರು (ಮದುವೆಯಾಗದ ಗಂಡಸರು/ಹೆಂಗಸರು) ವಾರ್ಷಿಕ ವಂತಿಗೆ ಪಾವತಿಸಿದ್ದಲ್ಲಿ ಅಂತಹ ಅವಿಭಕ್ತ ಕುಟುಂಬ ಸದಸ್ಯರಿಗೆ ಯೋಜನೆ ಸೌಲಭ್ಯ ಪಡೆಯಲು ಸರ್ಕಾರವು 2023-24ನೇ ಸಾಲಿನಿಂದ ಅವಕಾಶ ಕಲ್ಪಿಸಿದೆ. ಕುಟುಂಬದ ಎಲ್ಲಾ ಸದಸ್ಯರಿಗೆ ಒಂದೇ ರೇಷನ್ ಕಾರ್ಡ್ ಇಲ್ಲದಿದ್ದಲ್ಲಿ ಅವಕಾಶವಿರುವುದಿಲ್ಲ.

7. ಮದುವೆಯಾಗಿರುವ ಹೆಣ್ಣು ಮಗಳು ಹಾಗೂ ಅವಳ ಮಕ್ಕಳು ಅವರ ತವರು ಮನೆಯಲ್ಲಿಯೇ ಅಂದರೆ ಅವರ ತಂದೆ/ತಾಯಿ/ಅಣ್ಣ/ತಮ್ಮ/ ಪ್ರಧಾನ ಅರ್ಜಿದಾರರ ಕುಟುಂಬದಲ್ಲಿಯೇ ಯಾವುದೇ (ವಿಧವೆ/ವಿಚ್ಛೇದನೆ/ಬೇರ್ಪಟ್ಟಿರುವುದು ಇತ್ಯಾದಿ) ಕಾರಣಗಳಿಗೆ ವಾಸವಾಗಿದ್ದರೆ ಮತ್ತು ಅವರ ವಂತಿಗೆಯನ್ನು ಪ್ರಧಾನ ಅರ್ಜಿದಾರರು ಪಾವತಿಸಿದ್ದರೆ ಈ ಯೋಜನೆ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

8. ಪ್ರಸಕ್ತ ಸಾಲಿನ ಯೋಜನೆಯ ಅವಧಿಯಲ್ಲಿ ಮದುವೆಯಾಗಿ ಗಂಡನ ಮನೆಯಲ್ಲಿರುವಂತಹ ಹೆಣ್ಣು ಮಕ್ಕಳಿಗೆ ತವರು ಮನೆಯ ಕಾರ್ಡಿನ ಮೇಲೆ ಆ ವರ್ಷದ ವಾರ್ಷಿಕ ವಂತಿಗೆ ಪಾವತಿಸಿ ಸದಸ್ಯರನ್ನಾಗಿ ನೊಂದಣಿ ಮಾಡಬಾರದು. ಆದರೆ ನೊಂದಣಿ ಮಾಡಿದ ನಂತರ ಮದುವೆಯಾದಲ್ಲಿ ಆ ವರ್ಷದಲ್ಲಿ ಮಾತ್ರ ಯೋಜನೆಯ ಸೌಲಭ್ಯ ಪಡೆಯಬಹುದು.

9. ನವಜಾತ ಶಿಶುವು ತಾಯಿ ಹೆಸರು ಇರುವ ಯಶಸ್ವಿನಿ ಕಾರ್ಡ್‌ನ ಆಧಾರದ ಮೇಲೆ ಈ ಯೋಜನೆಯಡಿಯಲ್ಲಿ ಸೌಲಭ್ಯವನ್ನು ಮುಂದಿನ ವರ್ಷ ನೊಂದಣಿಯಾಗುವ ವರೆವಿಗೆ ಪಡೆಯಬಹುದು. ನಂತರಲ್ಲಿ ಮಗುವಿನ ಹೆಸರನ್ನು ನೊಂದಾಯಿಸಿಕೊಂಡು ಯೋಜನೆಯ ಸೌಲಭ್ಯ ಪಡೆಯಬಹುದು.

10. ಮೇಲೆ ವಿವರಿಸಿರುವಂತೆ ಅರ್ಹ ಸದಸ್ಯರನ್ನು ಹೊರತುಪಡಿಸಿ ಬೇರೆ ಯಾವುದೇ ಸದಸ್ಯರನ್ನು ಯಶಸ್ವಿನಿ ಯೋಜನೆಗೆ ಸೇರಿಸುವಂತಿಲ್ಲ. ಒಂದು ವೇಳೆ ಸುಳ್ಳು ಮಾಹಿತಿ ನೀಡಿ ಅಕ್ರಮವಾಗಿ ಅರ್ಜಿದಾರ ಅಥವಾ ಸಹಕಾರ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿಯ ತಪ್ಪಿನಿಂದಾಗಲಿ ಅರ್ಹರಲ್ಲದ ಸದಸ್ಯರಿಂದ ವಂತಿಗೆ ಪಾವತಿಸಿಕೊಂಡು ಅಂತಹ ವ್ಯಕ್ತಿಗಳನ್ನು ಗೊತ್ತಿದ್ದೋ ಅಥವಾ ಗೊತ್ತಿಲ್ಲದೆಯೋ ನೊಂದಣಿ ಮಾಡಿದ್ದರೂ ಸಹ ಅಂತಹ ವ್ಯಕ್ತಿಗಳು ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗುವುದಿಲ್ಲ ಹಾಗೂ ಅಂತಹ ವ್ಯಕ್ತಿಗಳು ಪಾವತಿಸಿದ ವಂತಿಗೆ ಹಣವನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಗುವುದು ಮತ್ತು ಅವರ ಯಶಸ್ವಿನಿ ಸದಸ್ಯತ್ವ ತಂತಾನೇ ರದ್ದುಗೊಳ್ಳುತ್ತದೆ. ಪ್ರತ್ಯೇಕ ರದ್ದತಿ ಆದೇಶ ಅವಶ್ಯಕತೆ ಇರುವುದಿಲ್ಲ.

11. ನೊಂದಣಿ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿಯನ್ನು ಅರ್ಜಿದಾರರು ನೀಡತಕ್ಕದ್ದು ಮತ್ತು ಎಲ್ಲಾ ವಿವರಗಳನ್ನು/ಕಾಲಂಗಳನ್ನು ಸ್ಪಷ್ಟವಾಗಿ, ಪೂರ್ಣವಾಗಿ, ಕಡ್ಡಾಯವಾಗಿ ಸಂಘದವರು ತುಂಬಬೇಕು. ಅರ್ಜಿಯಲ್ಲಿ ನೀಡಿರುವ ಮಾಹಿತಿಯನ್ನು ಗಣಕೀಕರಣ ಮಾಡಲಾಗುತ್ತಿದೆ. ಒಂದು ವೇಳೆ

ಅಪೂರ್ಣ ಮಾಹಿತಿ ಇದ್ದಲ್ಲಿ ಅಂಥವರಿಗೆ ಚಿಕಿತ್ಸೆಯನ್ನು ನೀಡಲು ವಿಳಂಭವಾಗುತ್ತದೆ. ಅಪೂರ್ಣ/ಅಸ್ಪಷ್ಟ ಮಾಹಿತಿ ಇರುವ ಗುರುತಿನ ಚೀಟಿಗಳನ್ನು ಚಿಕಿತ್ಸೆ ವೇಳೆಯಲ್ಲಿ ತಿರಸ್ಕರಿಸಲಾಗುವುದು.

12. 2023–24ನೇ ಸಾಲಿಗೆ ಈ ಯೋಜನೆಯಡಿ

(ಎ) ಗ್ರಾಮೀಣ ಸಹಕಾರ ಸಂಘಗಳ/ಸ್ವ-ಸಹಾಯ ಗುಂಪುಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ ರೂ.500/-ಗಳ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಹೆಚ್ಚುವರಿ ಸದಸ್ಯರಿಗೆ ರೂ.100/-ಗಳನ್ನು ಪಾವತಿಸತಕ್ಕದ್ದು.

(ಬಿ) ನಗರ ಸಹಕಾರ ಸಂಘಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ ರೂ.1000/-ಗಳ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಹೆಚ್ಚುವರಿ ಸದಸ್ಯರಿಗೆ ರೂ.200/-ಗಳನ್ನು ಪಾವತಿಸತಕ್ಕದ್ದು.

(ಸಿ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರುಗಳಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿ ಸಹಾಯ ಧನ ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಗೆಯನ್ನು ಸರ್ಕಾರವೇ ಭರಿಸುತ್ತದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸದಸ್ಯರ ವಿವರಗಳನ್ನು ಕಡ್ಡಾಯವಾಗಿ ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ ಈ ಸಮುದಾಯಗಳಿಗೆ ಸಂಬಂಧಿಸಿದಂತೆ ಜಾತಿ ಪ್ರಮಾಣ ಪತ್ರದಲ್ಲಿರುವ RD ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ಇಲ್ಲದಿದ್ದಲ್ಲಿ ಸರ್ಕಾರದಿಂದ ಅನುದಾನದ ಸೌಲಭ್ಯ ದೊರೆಯುವುದಿಲ್ಲ.

(ಡಿ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರಿಂದ ಯಾವುದೇ ವಂತಿಗೆಯನ್ನು ಪಾವತಿಸಿಕೊಳ್ಳದಿರುವುದರಿಂದ ಈ ಸಮುದಾಯದ ಸದಸ್ಯರನ್ನು ಒಂದೇ ಬಾರಿ ಮೂರು ವರ್ಷಗಳ ಅವಧಿಗೆ ನೊಂದಾಯಿಸಿಕೊಂಡು ಅದರಂತೆ ಮೂರು ವರ್ಷಗಳ ಅವಧಿಗೆ ಕಾರ್ಡುಗಳನ್ನು ವಿತರಿಸಲಾಗುವುದು. ಮುಂದಿನ ವರ್ಷಗಳಲ್ಲಿ ಸದರಿ ಕಾರ್ಡುಗಳಲ್ಲಿ ಯಾವುದೇ ತಿದ್ದುಪಡಿ/ಬದಲಾವಣೆ ಹಾಗೂ ಹೊಸ ಸದಸ್ಯರ ಸೇರ್ಪಡೆ/ತೆಗೆದು ಹಾಕುವುದು ಇದ್ದಲ್ಲಿ ಅದರಂತೆ ಪ್ರತಿ ವರ್ಷ ಕ್ರಮವಿಡಲಾಗುವುದು. ಪ್ರತಿ ವರ್ಷ ಆ ಸಮುದಾಯದ ಸದಸ್ಯರ ವಂತಿಗೆಯನ್ನು ಸರ್ಕಾರದಿಂದ ಕ್ಲೇಂ ಮಾಡಲಾಗುವುದು.

(ಇ) ಸದಸ್ಯರಿಂದ ಸಂಗ್ರಹಿಸಿದ ವಂತಿಗೆ ಪೈಕಿ (ಸದಸ್ಯರಿಂದ ಇದಕ್ಕಾಗಿ ಹೆಚ್ಚುವರಿ ಮೊತ್ತ ಸಂಗ್ರಹಿಸ ತಕ್ಕದ್ದಲ್ಲ) ಪ್ರತಿ ಕಾರ್ಡಿಗೆ ರೂ.25/- ಗಳನ್ನು ಸಹಕಾರ ಸಂಘಗಳು ಪ್ರೋತ್ಸಾಹ ಧನವಾಗಿ ಇಟ್ಟುಕೊಂಡು ಉಳಿದ ಮೊತ್ತವನ್ನು ಸದಸ್ಯತ್ವ ನೊಂದಣಿಯಾದ ಏಳು ದಿನಗಳೊಳಗಾಗಿ ಸಂಬಂಧಿಸಿದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಯಶಸ್ವಿನಿ ಟ್ರಸ್ಟ್ ಹೊಂದಿರುವ ಖಾತೆಗೆ ಜಮಾ ಮಾಡತಕ್ಕದ್ದು. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಜಮಾ ಆಗಿರುವ ವಂತಿಗೆ ಮೊತ್ತವನ್ನು ಸ್ವೀಕರಿಸಿದ 7 ದಿನದೊಳಗಾಗಿ ಅಪೆಕ್ಸ್ ಬ್ಯಾಂಕ್‌ನ ಕೇಂದ್ರ ಕಛೇರಿಯಲ್ಲಿ ಹೊಸದಾಗಿ ತೆರೆದಿರುವ ಯಶಸ್ವಿನಿ ಟ್ರಸ್ಟ್‌ನ ಉಳಿತಾಯ ಖಾತೆಗೆ ಜಮಾ ಮಾಡತಕ್ಕದ್ದು/ವರ್ಗಾಯಿಸತಕ್ಕದ್ದು.

(ಎಫ್) ವಿಳಂಭವಾದಲ್ಲಿ ಆ ಹಣವನ್ನು ಇಟ್ಟುಕೊಂಡ ಸಹಕಾರಿ ಸಂಘ/ಸಂಸ್ಥೆಯವರು ಬ್ಯಾಂಕಿಂಗ್ ನಿಯಮಗಳ ಪ್ರಕಾರ ಬಡ್ಡಿ ಪಾವತಿಮಾಡಲು ಬದ್ದರಾಗಿರುತ್ತಾರೆ. ಸದಸ್ಯರನ್ನು ನೊಂದಾಯಿಸಿರುವ ಸಹಕಾರ ಸಂಘ/ಬ್ಯಾಂಕುಗಳು ಸದಸ್ಯರಿಂದ ಸಂಗ್ರಹಿಸಿದ ವಂತಿಗೆಯನ್ನು ಆ ಜಿಲ್ಲೆಯ ಡಿಸಿಸಿ ಬ್ಯಾಂಕು ಮೂಲಕವೇ ಸಂದಾಯ ಮಾಡಬೇಕು. ಯಾವುದೇ ಕಾರಣಕ್ಕೆ ನೇರವಾಗಿ ಅಪೆಕ್ಸ್ ಬ್ಯಾಂಕಿನಲ್ಲಿರುವ ಟ್ರಸ್ಟ್ ಖಾತೆಗೆ ಪಾವತಿಸತಕ್ಕದಲ್ಲ.

(ಜಿ) ಸದಸ್ಯರಿಂದ ಅಗತ್ಯ ದಾಖಲೆಗಳು ಫೋಟೋ ಸಹಿತ ಸಂಪೂರ್ಣ ವಿವರಗಳು, ವಾರ್ಷಿಕ ವಂತಿಗೆ ಸಂದಾಯವಾದ ನಂತರವೇ ಸಂಪೂರ್ಣವಾಗಿ ತುಂಬಿದ ಫಾರಂಗಳನ್ನು Scanning ಗೆ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು CDO ಗೆ ಸಲ್ಲಿಸತಕ್ಕದ್ದು. ತಾಲ್ಲೂಕು CDO ರವರು ಅರ್ಜಿ ಫಾರಂನಲ್ಲಿ ಸಂಪೂರ್ಣ ವಿವರಗಳನ್ನು ಭರ್ತಿಮಾಡಿರುವ ಬಗ್ಗೆ ಖಾತರಿ ಪಡಿಸಿಕೊಂಡ ನಂತರವೇ CDO ರವರು ದೃಢೀಕರಿಸಿ Scanning ಗೆ ವ್ಯವಸ್ಥೆ ಮಾಡತಕ್ಕದ್ದು.

13. 2023–24ನೇ ಸಾಲಿಗೆ ಸದಸ್ಯತ್ವ ನೊಂದಣಿ ಜನವರಿ 2024 ರಲ್ಲಿ ಪ್ರಾರಂಭವಾಗಿದೆ.

14. 2023–24ನೇ ಸಾಲಿನಲ್ಲಿ ನೊಂದಣಿಯಾದವರಿಗೆ ಚಿಕಿತ್ಸಾ ಅವಧಿಯನ್ನು ಏಪ್ರಿಲ್ 2024 ರಿಂದ ಮಾರ್ಚ್ 2025 ರವರೆವಿಗೆ ನಿಗದಿಗೊಳಿಸಿದೆ.

**<u>ಯಶಸ್ವಿನಿ ಯೋಜನೆಯ ಷರತ್ತು ಮತ್ತು ನಿಬಂಧನೆಗಳು ಹಾಗೂ ಚಿಕಿತ್ಸಾ ಸೌಲಭ್ಯಗಳು :</u>**

15. "ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಯೋಜನೆ"ಯು ವಿಮಾ ಯೋಜನೆಯಲ್ಲ ಇದು ಒಂದು ಸ್ವಯಂನಿಧಿ ಚಿಕಿತ್ಸಾ ಯೋಜನೆ.

16. ಈ ಕೆಳಕಂಡ ಸೌಲಭ್ಯಗಳನ್ನು ಯಶಸ್ವಿನಿ ಸದಸ್ಯರಿಗೆ ಒದಗಿಸಲಾಗುವುದು.

ಎ) ಪ್ರಸ್ತುತ ಯಶಸ್ವಿನಿ ಯೋಜನೆಯಡಿಯಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿನ ಚಿಕಿತ್ಸೆಗಳ ಪೈಕಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿರುವ/ಪ್ರಕಟಿಸಲಾಗುವ ಯಶಸ್ವಿನಿ ಟ್ರಸ್ಟ್ ಗುರ್ತಿಸಿ ಅಳವಡಿಸಿಕೊಂಡಿರುವ 1650 ಚಿಕಿತ್ಸೆಗಳು ಮತ್ತು 478 ICU ಚಿಕಿತ್ಸೆಗಳೂ ಸೇರಿ ಒಟ್ಟು 2128 ಚಿಕಿತ್ಸೆಗಳನ್ನು ಯಶಸ್ವಿನಿ ಯೋಜನೆಗೆ ಅಳವಡಿಸಿಕೊಳ್ಳಲಾಗಿದೆ. ಟ್ರಸ್ಟ್ ಗುರ್ತಿಸಿದ ಚಿಕಿತ್ಸೆಗಳನ್ನು ಷರತ್ತಿಗಳಿಗೊಳಪಟ್ಟು ರಾಜ್ಯಾದ್ಯಂತ ಟ್ರಸ್ಟ್‌ನಿಂದ ಅಂಗೀಕರಿಸಲ್ಪಟ್ಟ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿರುವ/ಪ್ರಕಟಿಸಲಾಗುವ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಮಾತ್ರ ಯೋಜನೆಯಡಿ ಚಿಕಿತ್ಸಾ ಸೌಲಭ್ಯ ಪಡೆಯಬಹುದು.

ಬಿ) ಯೋಜನೆಯಲ್ಲಿ ಒಳಪಡದ ಚಿಕಿತ್ಸೆಗಳ ಮತ್ತು ಟ್ರಸ್ಟ್ ಅಂಗೀಕರಿಸದ ಆಸ್ಪತ್ರೆಗಳಲ್ಲಿ ಪಡೆದಂತಹ ಚಿಕಿತ್ಸೆಗಳಿಗೆ ಯಶಸ್ವಿನಿ ಟ್ರಸ್ಟ್ ಜವಾಬ್ದಾರರಾಗುವುದಿಲ್ಲ ಹಾಗೂ ಯಾವುದೇ ಕಾರಣಕ್ಕೂ ಆಸ್ಪತ್ರೆಗಳಿಗಾಗಲಿ ಅಥವಾ ಫಲಾನುಭವಿಗಳಿಗಾಗಲಿ ಚಿಕಿತ್ಸಾ ವೆಚ್ಚವನ್ನು ಪಾವತಿಸಲಾಗುವುದಿಲ್ಲ. ಯಶಸ್ವಿನಿ

ಪ್ರೋಟೋಕಾಲ್‌ನಂತೆ ನಿಗದಿಪಡಿಸಿರುವ ಅರ್ಹ ಚಿಕಿತ್ಸೆಗಳ ಪ್ಯಾಕೇಜಿನ ದರದ ಮಿತಿಗೆ ಒಳಪಟ್ಟು ಫಲಾನುಭವಿ ಕುಟುಂಬದ ವಾರ್ಷಿಕ ವೈದ್ಯಕೀಯ ಚಿಕಿತ್ಸೆಯ ವೆಚ್ಚದ ಗರಿಷ್ಠ ಮಿತಿ ರೂ.5.00 ಲಕ್ಷ ಇರುತ್ತದೆ.

ಸಿ) ಎರಡು ಜೀವಂತ ಮಕ್ಕಳು ಅಥವಾ ಎರಡು ಹೆರಿಗೆಗೆ ಮಾತ್ರ ಯಶಸ್ವಿನಿ ಯೋಜನೆಯಲ್ಲಿ ಸೌಲಭ್ಯ ದೊರೆಯುತ್ತದೆ.

ಡಿ) ಯಶಸ್ವಿನಿ ಯೋಜನೆಯ ಪ್ರೋಟೋಕಾಲ್ ಪ್ರಕಾರ ಯಶಸ್ವಿನಿ ಫಲಾನುಭವಿಗಳು ಜನರಲ್ ವಾರ್ಡ್‌ನಲ್ಲಿ ಮಾತ್ರ ಚಿಕಿತ್ಸೆ ಪಡೆಯಲು ಅರ್ಹರಿರುತ್ತಾರೆ. ಒಂದು ವೇಳೆ ಯೋಜನೆಯಡಿ ನಿಗದಿಪಡಿಸಿರುವ ಜನರಲ್ ವಾರ್ಡ್‌ಗೆ ಬದಲಾಗಿ ಉನ್ನತ ವಾರ್ಡ್ (Semi Special Ward or Special Ward) ನಲ್ಲಿ ಚಿಕಿತ್ಸೆ ಪಡೆಯಲು ಇಚ್ಛಿಸಿದಲ್ಲಿ ಸದರಿ ಫಲಾನುಭವಿಗಳಿಗೆ ಯೋಜನೆಯಡಿ ನಿಗದಿ ಪಡಿಸಿರುವಂತೆ ಜನರಲ್ ವಾರ್ಡ್‌ಗೆ ಅನ್ವಯಿಸುವ ಚಿಕಿತ್ಸೆಯ ದರದ ಮೊತ್ತವನ್ನು ಮಾತ್ರ ಯೋಜನೆಯಡಿ ಟ್ರಸ್ಟ್‌ನಿಂದ ಭರಿಸಲಾಗುವುದು. ಉನ್ನತ ವಾರ್ಡ್‌ಗೆ/ಸ್ಪೆಷಲ್ ವಾರ್ಡ್‌ಗೆ ಆಗುವ ವ್ಯತ್ಯಾಸದ ಮೊತ್ತವನ್ನು ಸದರಿ ಫಲಾನುಭವಿಗಳೇ ಭರಿಸಬೇಕು.

ಇ) ಸ್ಪೆಷಲ್ ವಾರ್ಡ್‌ನ್ನು ಯಶಸ್ವಿನಿ ಸದಸ್ಯರು ಸ್ವ-ಇಚ್ಛೆಯಿಂದ ಬಯಸಿದಲ್ಲಿ ಮಾತ್ರ ಅವರಿಂದ ಲಿಖಿತ ಮೂಲಕ ಬರೆಯಿಸಿಕೊಂಡು ಸ್ಪೆಷಲ್ ವಾರ್ಡ್ ನೀಡಬೇಕು. ಬಲವಂತವಾಗಿ ನೆಟ್‌ವರ್ಕ್ ಆಸ್ಪತ್ರೆಗಳು ಯಶಸ್ವಿನಿ ಸದಸ್ಯರನ್ನು ಸ್ಪೆಷಲ್ ವಾರ್ಡ್‌ಗೆ ದಾಖಲು ಮಾಡತಕ್ಕದಲ್ಲ.

ಎಫ್) ಆಸ್ಪತ್ರೆಗಳು, ಸ್ಪೆಷಲ್ ವಾರ್ಡ್ ಉಪಯೋಗಿಸಿದ ಫಲಾನುಭವಿಗೆ ಕ್ಲೇಂ ಮಾಡುವ ಬಿಲ್ಲಿನಲ್ಲಿ ಯೋಜನೆಯ ಪ್ಯಾಕೇಜ್‌ನಲ್ಲಿ ಬರುವ ಮೊತ್ತವನ್ನು ಕಳೆದು ಆಸ್ಪತ್ರೆಗಳು ಸ್ಪೆಷಲ್ ವಾರ್ಡ್‌ಗೆ ವಿಧಿಸುವ ದರದಲ್ಲಿ ಬಿಲ್ಲು ಮಾಡಿ, ಹೆಚ್ಚುವರಿ ವ್ಯತ್ಯಾಸದ ಮೊತ್ತವನ್ನು ಫಲಾನುಭವಿಗಳಿಂದ ವಸೂಲಿ ಮಾಡಿಕೊಳ್ಳಲು ಅವಕಾಶ ವಿರುತ್ತದೆ.

ಜಿ) ಆಸ್ಪತ್ರೆಗಳು ಅವುಗಳು ವಿಧಿಸುವ ಸ್ಪೆಷಲ್ ವಾರ್ಡ್‌ಗಳ ದರ (Package)ವನ್ನು ಯಶಸ್ವಿನಿ ಕೌಂಟರ್‌ನಲ್ಲಿ ಮತ್ತು ಆಸ್ಪತ್ರೆಯ ಮುಖ್ಯ ಸ್ಥಳಗಳಲ್ಲಿ ಬೋರ್ಡ್ ಬರೆಯಿಸಿ ಹಾಕಬೇಕು.

ಹೆಚ್) ಯಶಸ್ವಿನಿ ಯೋಜನೆಯ ಪ್ಯಾಕೇಜಿನಲ್ಲಿ Implants ಅಗತ್ಯವಿರುವ ಕಡೆ Implants ದರವನ್ನು ಒಳಗೊಂಡಿರುತ್ತದೆ. (Ex. Knee replacement, lens in cataract surgery) ಒಂದು ವೇಳೆ ಫಲಾನುಭವಿಗಳು ಉನ್ನತ Implants ಅಥವಾ lens ಪಡೆಯಲು ಸ್ವ-ಇಚ್ಛೆಯಿಂದ ಲಿಖಿತ ಮೂಲಕ ಒಪ್ಪಿಗೆ ಸೂಚಿಸಿದಲ್ಲಿ, ಅಂತಹ ಉನ್ನತ Implants ಮತ್ತು lens ಗೆ ತಗಲುವ ವ್ಯತ್ಯಾಸದ ಹೆಚ್ಚುವರಿ ಮೊತ್ತವನ್ನು ಅಂತಹ ಫಲಾನುಭವಿಗಳೇ ಭರಿಸಿ ಚಿಕಿತ್ಸೆಯನ್ನು ಪಡೆಯತಕ್ಕದ್ದು.

ಐ) ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಯಶಸ್ವಿನಿ ಸದಸ್ಯರಿಗೆ ಹೊರ ರೋಗಿ ಚಿಕಿತ್ಸೆಗೆ (OPD) ಗರಿಷ್ಠ ರೂ.200/-ಗಳನ್ನು (ಮೂರು ತಿಂಗಳ ಅವಧಿಗೆ) ಮಿತಿ ನಿಗಧಿಪಡಿಸಿದ್ದು, ಈ ಪೈಕಿ ರೂ.100/-ಗಳನ್ನು ಯಶಸ್ವಿನಿ ಟ್ರಸ್ಟ್ ವತಿಯಿಂದ ಪಾವತಿಸಲಾಗುವುದು.

ಜೆ) ಕಾರ್ಡ್ ಪಡೆದ ಹದಿನೈದು (15) ದಿನಗಳ ನಂತರ ಯಶಸ್ವಿನಿ ಕಾರ್ಡುದಾರರು ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಅರ್ಹರಾಗಿರುತ್ತಾರೆ.

## ಯೋಜನೆ ಬಗ್ಗೆ ತಿಳುವಳಿಕೆ, ಪ್ರಚಾರ ಮತ್ತು ವ್ಯವಸ್ಥಿತ ಅನುಷ್ಠಾನಕ್ಕೆ ಕೈಗೊಳ್ಳಬೇಕಾದ ಕ್ರಮಗಳು.

16. ಸದಸ್ಯರ ನೋಂದಣಿಗೆ ಮಾರ್ಗಸೂಚಿಗಳು, ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳ ಯಾದಿ, ಶಸ್ತ್ರಚಿಕಿತ್ಸೆಗಳ ಯಾದಿ ಇವುಗಳನ್ನು ಸಹಕಾರ ಇಲಾಖೆಯ ಸಹಕಾರ ಸಿಂಧು ವೆಬ್‌ಸೈಟ್‌ನಲ್ಲಿ/ಟ್ರಸ್ಟ್‌ನ ವೆಬ್‌ಸೈಟ್‌ನಲ್ಲೂ ಅಪ್‌ಲೋಡ್ ಮಾಡಲಾಗುವುದು.

17. ಸದಸ್ಯರು ಕಡ್ಡಾಯವಾಗಿ ಮೊಬೈಲ್ ಸಂಖ್ಯೆ ಮತ್ತು ಆಧಾರ್ ಕಾರ್ಡ್‌ನ್ನು ಒದಗಿಸತಕ್ಕದ್ದು.

18. ಯಶಸ್ವಿನಿ ಯೋಜನೆಯ ಮಾರ್ಗಸೂಚಿಗಳ ಬಗ್ಗೆ ತಿಳುವಳಿಕೆ ನೀಡಲು ಆಯಾ ಪ್ರಾಂತ್ಯದ ಸಹಕಾರ ಸಂಘಗಳ ಜಂಟಿ ನಿಬಂಧಕರು ಅವರ ವ್ಯಾಪ್ತಿಯ ಇಲಾಖಾಧಿಕಾರಿಗಳ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ, ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳ ಮತ್ತು ಇತರೆ ಪ್ರಮುಖ ಸಹಕಾರ ಸಂಘ/ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯನ್ನು ಪ್ರಾಂತೀಯ ಮಟ್ಟದಲ್ಲಿ ನಿರ್ವಹಿಸುವುದು. ನಂತರ ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು, ಅವರ ಜಿಲ್ಲೆಯ ಸಹಕಾರ ಸಂಘಗಳ ಅಧ್ಯಕ್ಷರ, ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಮತ್ತು ಸಂಬಂಧಿಸಿದ ಇಲಾಖಾಧಿಕಾರಿಗಳ ಸಭೆ ಕರೆದು ಕಾರ್ಯಾಗಾರ ಏರ್ಪಡಿಸಿ ಯೋಜನೆಯ ಮಾರ್ಗಸೂಚಿ ನಿಯಮಗಳು, ಇತಿಮಿತಿಗಳು ಮತ್ತು ಯೋಜನೆಯಡಿ ಸೌಲಭ್ಯದ ವಿವರಗಳ ಮಾಹಿತಿ ನೀಡಿ, ಯೋಜನೆ ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ನಿಬಂಧಕರಿಗೆ ಮತ್ತು ಸರ್ಕಾರಕ್ಕೆ ಸಲ್ಲಿಸುವುದು.

**ಚಿಕಿತ್ಸಾ ಸೌಲಭ್ಯ ಪಡೆಯಲು ಅನುಸರಿಸಬೇಕಾದ ಕ್ರಮಗಳು:**

19. ಯೋಜನೆಯಲ್ಲಿ ನೋಂದಾಯಿತ ಯಶಸ್ವಿನಿ ಸದಸ್ಯರಿಗೆ ಯುನಿಕ್ ಐಡಿ ಸಂಖ್ಯೆ ಹೊಂದಿರುವ ಗುರುತಿನ ಚೀಟಿಯನ್ನು ನೀಡಲಾಗುವುದು. ಈ ಗುರುತಿನ ಚೀಟಿಯನ್ನು ಹಾಜರುಪಡಿಸಿ ಚಿಕಿತ್ಸೆಯನ್ನು ಪಡೆಯಬಹುದು. ಗುರುತಿನ ಚೀಟಿಯನ್ನು ಚಿಕಿತ್ಸೆಗಾಗಿ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಭೇಟಿಯ ಸಮಯದಲ್ಲಿ ಯಶಸ್ವಿನಿ ಸದಸ್ಯರು ಕಡ್ಡಾಯವಾಗಿ ಹಾಜರುಪಡಿಸಬೇಕು. ಇಲ್ಲದಿದ್ದಲ್ಲಿ ನೆಟ್‌ವರ್ಕ್ ಆಸ್ಪತ್ರೆಗಳು ಯಶಸ್ವಿನಿ ಯೋಜನೆಯಡಿ ಚಿಕಿತ್ಸೆಯನ್ನು ನಿರಾಕರಿಸುತ್ತವೆ. ಇಂತಹ ಪ್ರಕರಣಗಳಿಗೆ ಯಶಸ್ವಿನಿ ಟ್ರಸ್ಟ್ ಜವಾಬ್ದಾರಿಯಾಗುವುದಿಲ್ಲ.

20. ಆಸ್ಪತ್ರೆಯ ವೈದ್ಯಾಧಿಕಾರಿಗಳು ಫಲಾನುಭವಿಗಳ ಆರೋಗ್ಯ ತಪಾಸಣೆ ಮಾಡಿ ಚಿಕಿತ್ಸೆ ಅವಶ್ಯವೆಂದು ಕಂಡುಬಂದಲ್ಲಿ ಮತ್ತು ಸದರಿ ಚಿಕಿತ್ಸೆಯು ಯೋಜನೆಯ ಪ್ಯಾಕೇಜ್‌ನಲ್ಲಿ ಒಳಗೊಂಡಿದ್ದಲ್ಲಿ, ಪೂರ್ಣ ದಾಖಲಾತಿಗಳು ಹಾಗೂ ಚಿಕಿತ್ಸಾ ವಿವರಗಳೊಂದಿಗೆ ಆನ್ ಲೈನ್ ಮೂಲಕ ಅನುಷ್ಠಾನ ಏಜೆನ್ಸಿಗೆ (ಟಿಪಿಎ) ಚಿಕಿತ್ಸೆಗೆ ಪೂರ್ವಾನುಮತಿ ಕೋರಿ ಪ್ರಸ್ತಾವನೆ ಕಳುಹಿಸುವುದು. ಕೋರಿರುವ ಚಿಕಿತ್ಸೆಯು ನಿಯಮಗಳನ್ವಯ ಅರ್ಹತೆ ಇದ್ದಲ್ಲಿ ಪರಿಶೀಲಿಸಿ ಆನ್ ಲೈನ್ ಮೂಲಕವೇ ಟಿಪಿಎ ದವರು ಪೂರ್ವಾನುಮತಿ ನೀಡುವರು. ನಂತರ ಆಸ್ಪತ್ರೆಯವರು ಚಿಕಿತ್ಸೆಯನ್ನು ಪ್ರಕ್ರಿಯೆಯನ್ನು ಪ್ರಾರಂಭಿಸುವರು.

21. ಚಿಕಿತ್ಸಾ ವೆಚ್ಚದ ಬಿಲ್ಲುಗಳನ್ನು ಅನುಷ್ಠಾನ ಸಂಸ್ಥೆಯು ನೆಟ್‌ವರ್ಕ್ ಆಸ್ಪತ್ರೆಗಳಿಂದ ತರಿಸಿಕೊಂಡು ಟ್ರಸ್ಟ್‌ನಿಂದ ಮಂಜೂರು ಮಾಡಿಸಿಕೊಂಡು ನೇರವಾಗಿ ಆಸ್ಪತ್ರೆಗಳಿಗೆ ಪಾವತಿಸಲಾಗುತ್ತಿದೆ. ಆದ್ದರಿಂದ ಸದಸ್ಯರು ಯಾವುದೇ ಕಾರಣಕ್ಕೂ ಆಸ್ಪತ್ರೆಗೆ ಚಿಕಿತ್ಸಾ ವೆಚ್ಚ ನೀಡುವಂತಿಲ್ಲ. ಒಂದು ವೇಳೆ ಸದಸ್ಯರು ಚಿಕಿತ್ಸಾ ವೆಚ್ಚವನ್ನು ಪಾವತಿಸಿದರೆ ಅದಕ್ಕೆ ಟ್ರಸ್ಟ್ ಜವಾಬ್ದಾರಿಯಲ್ಲ.

22. ಆಸ್ಪತ್ರೆಗೆ ದಾಖಲಾಗುವ ಸಂದರ್ಭದಲ್ಲಿ ತಾವು ಯಶಸ್ವಿನಿ ಸದಸ್ಯರೆಂದು ತಿಳಿಸಿ ಐಡಿ ಕಾರ್ಡ್ ಹಾಜರು ಪಡಿಸಬೇಕು. ಚಿಕಿತ್ಸೆ/ಶಸ್ತ್ರಚಿಕಿತ್ಸೆ ಪಡೆದ ನಂತರ ಯಶಸ್ವಿನಿ ಸದಸ್ಯರು ಎಂದು ತಿಳಿಸಿದರೆ ಯೋಜನೆಯಡಿ ಸೌಲಭ್ಯ ದೊರೆಯುವುದಿಲ್ಲ. ಚಿಕಿತ್ಸೆ ಪಡೆಯುವಲ್ಲಿ ಏನಾದರೂ ಸಮಸ್ಯೆ ಉಂಟಾದಲ್ಲಿ ಯಶಸ್ವಿನಿ ಟ್ರಸ್ಟ್, ಸಂಬಂಧಿಸಿದ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಸಂಬಂಧಿಸಿದ ಜಿಲ್ಲಾ ಸಮನ್ವಯಾಧಿಕಾರಿಗಳು ಅಥವಾ ಅನುಷ್ಠಾನ ಸಂಸ್ಥೆಯನ್ನು ಸಂಪರ್ಕಿಸಬಹುದು.

23. ಗುರುತಿನ ಕಾರ್ಡನ್ನು ಬೇರೆಯವರಿಗೆ ವರ್ಗಾಯಿಸತಕ್ಕದ್ದಲ್ಲ. ಯಾವುದೇ ಫಲಾನುಭವಿ ತಪ್ಪು ಮಾಹಿತಿ ಕೊಟ್ಟು ಯಶಸ್ವಿನಿ ನಿಯಮಗಳಿಗೆ ವಿರುದ್ಧವಾಗಿ ಕಾರ್ಡನ್ನು ಪಡೆದುಕೊಂಡಿದ್ದಲ್ಲಿ ಅಥವಾ ದುರ್ಬಳಕೆ ಮಾಡಿಕೊಂಡಲ್ಲಿ ಅಂತಹ ಕಾರ್ಡನ್ನು ರದ್ದು ಪಡಿಸಲಾಗುವುದು ಮತ್ತು ಕಾನೂನಿನ ಕ್ರಮಕ್ಕೆ ಗುರಿಪಡಿಸಲಾಗುವುದು. ಯಶಸ್ವಿನಿ ಕಾರ್ಡ್‌ನ್ನು ಫಲಾನುಭವಿಗಳು ಜೋಪಾನವಾಗಿ ಇಟ್ಟುಕೊಳ್ಳತಕ್ಕದ್ದು. ಒಂದು ವೇಳೆ ಕಾರ್ಡ್‌ನ್ನು ಕಳೆದು ಕೊಂಡಲ್ಲಿ ರೂ.250/-ಗಳ ಶುಲ್ಕವನ್ನು ಟ್ರಸ್ಟ್‌ಗೆ ಪಾವತಿಸಿ ಜಿಲ್ಲೆಯ ಉಪ ನಿಬಂಧಕರ ಮೂಲಕ ಟ್ರಸ್ಟ್‌ಗೆ ಮನವಿ ಸಲ್ಲಿಸಿ ಡೂಪ್ಲಿಕೇಟ್ ಕಾರ್ಡ್‌ನ್ನು ಪಡೆಯಬಹುದು.

**************************

ಅನುಬಂಧ - 2

## SAST Period 2017-18 Denied cases - Final

| S.No | District | Hospital | Count | Claims Bill Amt. |
|---|---|---|---|---|
| 1 | DAKSHINA KANNADA | PRASAD NETRALAYA Mangalore | 17 | 1,06,500 |
| 2 | DAKSHINA KANNADA | JUSTICE KS HEGDE CHARITABLE HOSPITAL | 5 | 4,69,010 |
| 3 | DAKSHINA KANNADA | FATHER MULLER MEDICAL COLLEGE HOSPITAL | 4 | 39,400 |
| 4 | DAKSHINA KANNADA | PUTTUR CITY HOSPITAL PVT LTD | 4 | 97,900 |
| 5 | DAKSHINA KANNADA | KVG MEDICAL COLLEGE AND HOSPITAL | 3 | 51,700 |
| 6 | DAKSHINA KANNADA | CHETANA HOSPITAL | 2 | 14,700 |
| 7 | DAKSHINA KANNADA | PRAGATHI SPECIALITY HOSPITAL | 2 | 76,414 |
| 8 | DAKSHINA KANNADA | GLOBAL MULTISPECIALITY HOSPITAL INDIA PVT LTD | 2 | 32,000 |
| 9 | DAKSHINA KANNADA | SOMAYAJI HOSPITAL | 2 | 48,155 |
| 10 | DAKSHINA KANNADA | MAHAVEER MEDICAL CENTRE | 1 | 8,166 |
| 11 | DAKSHINA KANNADA | ADARSHA HOSPITAL PUTTUR | 1 | 11,952 |
| 12 | DAKSHINA KANNADA | mangala hospital and mangala kidney foundation | 1 | 15,000 |
| 13 | DAKSHINA KANNADA | KMC HOSPITAL - NEW | 1 | 6,500 |
| 14 | DAKSHINA KANNADA | FR L M PINTO HEALTH CENTRE CHARITABLE TRUST | 1 | 28,051 |
| 15 | DAKSHINA KANNADA | BENAKA HEALTH CENTRE UJIRE | 1 | 10,397 |
| 16 | DAKSHINA KANNADA | A J HOSPITAL AND RESEARCH CENTRE | 1 | 12,618 |
| 17 | DAKSHINA KANNADA | ATHENA HEALTH CARE PVT LTD | 1 | 25,000 |
| 18 | DAKSHINA KANNADA | KANACHUR HOSPITAL AND RESEARCH CENTRE | 1 | 3,000 |
| | | Grand Total | 50 | 1056463 |

Kumar.S

Accounts Officer
YESHASVINI CO-OPERATIVE FARMERS
HEALTH CARE TRUST
BENGALURU -560 004

# M D India Period 2016-17 Denied Cases

| S.No | District | Hospital Name | Count | Preauth App. Amt |
|---|---|---|---|---|
| 1 | Dakshina Kannada | Justice K S Hegde Charitable Hospital | 10 | 2,78,000 |
| 2 | Dakshina Kannada | Yenepoya Medical College Hospital | 10 | 5,21,600 |
| 3 | Dakshina Kannada | Puttur City Hospital | 7 | 50,500 |
| 4 | Dakshina Kannada | Somayaji Hospital | 6 | 56,500 |
| 5 | Dakshina Kannada | Pragathi Speciality Hospital | 5 | 83,600 |
| 6 | Dakshina Kannada | Omega Hospital | 5 | 3,07,900 |
| 7 | Dakshina Kannada | AJ Hospital and RC | 4 | 3,35,200 |
| 8 | Dakshina Kannada | Kanachur Hospital & Research Center | 4 | 47,900 |
| 9 | Dakshina Kannada | Mangala Hospital | 3 | 1,41,000 |
| 10 | Dakshina Kannada | KVG Medical College and Hospital | 3 | 46,700 |
| 11 | Dakshina Kannada | Chetana Hospital | 3 | 35,200 |
| 12 | Dakshina Kannada | KMC Hospital Jyothi | 2 | 1,60,500 |
| 13 | Dakshina Kannada | Global Multispeciality Hospital | 2 | 1,15,000 |
| 14 | Dakshina Kannada | Wenlock Hospital | 1 | 80,000 |
| 15 | Dakshina Kannada | Yenepoya Speciality Hospital | 1 | 1,05,000 |
| 16 | Dakshina Kannada | Adarsha Hosptial | 1 | 14,000 |
| 17 | Dakshina Kannada | Benaka Health Center | 1 | 33,300 |
| 18 | Dakshina Kannada | Indiana Hospital & Heart Institute | 1 | 7,500 |
| 19 | Dakshina Kannada | Father Muller Charitable institutions | 1 | 20,000 |
| | | **Grand Total** | **70** | **2439400** |

Kumar. J

Accounts Officer
YESHASVINI CO-OPERATIVE FARMERS
HEALTH CARE TRUST
BENGALURU -560 004

## M D India Period 2016-17 Denied Cases

| S.No | District | Hospital Name | Count | Preauth App. Amt |
|---|---|---|---|---|
| 1 | Udupi | Kasturba Hospital | 40 | 7,78,055 |
| 2 | Udupi | Sri Devi Nursing Home,Udupi | 6 | 78,000 |
| 3 | Udupi | Chinmaya Hospital Kundapur | 6 | 88,800 |
| 4 | Udupi | New City Multispeciality Hospital | 5 | 1,07,500 |
| 5 | Udupi | Charmakki Narayana Shetty Memorial Lions Hospital,Udupi | 4 | 23,000 |
| 6 | Udupi | City Hospital & Diagnostic Center | 3 | 1,35,800 |
| 7 | Udupi | Spandana Maternity & General Hospital | 3 | 47,100 |
| 8 | Udupi | NITTE GAJRIA Speciality Hospital | 2 | 17,680 |
| 9 | Udupi | Prasad Nethralaya | 1 | 7,000 |
| 10 | Udupi | Manjunatha Eye Hospital | 1 | 7,000 |
| 11 | Udupi | Surgeons Hospital | 1 | 14,000 |
| 12 | Udupi | Mitra Hospital | 1 | 17,500 |
| | | **Grand Total** | **73** | **1321435** |

## SAST Period 2017-18 Denied cases - Final

| S.No | District | Hospital | Count | Claims Bill Amt. |
|---|---|---|---|---|
| 1 | UDUPI | KASTURBA HOSPITAL UDUPI | 15 | 6,75,700 |
| 2 | UDUPI | SRI DEVI HOSPITAL | 7 | 1,58,254 |
| 3 | UDUPI | Manjunatha Eye Hospital | 4 | 26,000 |
| 4 | UDUPI | ADARSHA HOSPITAL KUNDAPURA | 3 | 37,500 |
| 5 | UDUPI | DR N R ACHARYA MEMORIAL HOSPITAL | 2 | 30,000 |
| 6 | UDUPI | SURGEONS HOSPITAL | 2 | 32,500 |
| 7 | UDUPI | NEW CITY HOSPITAL | 2 | 47,040 |
| 8 | UDUPI | CITY HOSPITAL AND DIAGNOSTIC CENTRE PVT LTD | 1 | 24,333 |
| 9 | UDUPI | SRI MATHA HOSPITAL | 1 | 7,000 |
| 10 | UDUPI | PRASAD HOSPITAL | 1 | 14,000 |
| 11 | UDUPI | MAHESH HOSPITAL | 1 | 14,000 |
| | | Grand Total | 39 | 1066327 |

Kumar. P

Accounts Officer
YESHASVINI CO-OPERATIVE FARMERS
HEALTH CARE TRUST
BENGALURU -560 004

ಅನುಬಂಧ-2ಎ

ಜಿಲ್ಲೆ: **ದಕ್ಷಿಣ ಕನ್ನಡ** :ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳ ಪಟ್ಟಿ (ಹಿಂದಿನ ಯಶಸ್ವಿನಿ ಯೋಜನೆ)

| ಕ್ರಸಂ | ಆಸ್ಪತ್ರೆಗಳ ಹೆಸರು | ಸರ್ಕಾರಿ/ಖಾಸಗಿ | ವಿಳಾಸ |
|---|---|---|---|
| 1 | ಎ.ಜೆ ಆಸ್ಪತ್ರೆ ಮತ್ತು ಆರ್.ಸಿ | ಖಾಸಗಿ | ಸಂಶೋಧನಾ ಕೇಂದ್ರ ಮಂಗಳೂರು-ಉಡುಪಿ ಹೆದ್ದಾರಿ, ಕುಂಟಿಕಾನ, ಮಂಗಳೂರು-575004 ದ.ಕ. |
| 2 | ಆದರ್ಶ ಹಾಸ್ಪಿಟಲ್ | ಖಾಸಗಿ | ಆದರ್ಶ ಆಸ್ಪತ್ರೆ, ಎ.ಪಿ.ಎಂ.ಸಿ ರಸ್ತೆ, ಪುತ್ತೂರು-574 201, ದ.ಕ. |
| 3 | ಆಳ್ವಾಸ್ ಆರೋಗ್ಯ ಕೇಂದ್ರ | ಖಾಸಗಿ | ಆಳ್ವಾಸ್ ಆರೋಗ್ಯ ಕೇಂದ್ರ, ಮೂಡುಬಿದಿರೆ-574227, ದ.ಕ |
| 4 | ಅಥೇನಾ ಆಸ್ಪತ್ರೆ | ಖಾಸಗಿ | ಅಥೇನಾ ಆಸ್ಪತ್ರೆ, ಫಳ್ನೀರ್ ರಸ್ತೆ, ಮಂಗಳೂರು-575001 ದ.ಕ |
| 5 | ಬೆನಕ ಆರೋಗ್ಯ ಕೇಂದ್ರ | ಖಾಸಗಿ | ಬೆನಕ ಆಸ್ಪತ್ರೆ, ಮುಖ್ಯ ರಸ್ತೆ ಉಯಿಜ್ರೆ ದ.ಕ |
| 6 | ಚೇತನಾ ಆಸ್ಪತ್ರೆ | ಖಾಸಗಿ | ಡಾ. ಜೆ.ಸಿ. ಅಡಿಗ, ಚೇತನ ಆಸ್ಪತ್ರೆ, ಶ್ರೀ ಮಹಾಮಾಯಾ ದೇವಸ್ಥಾನದ ಹತ್ತಿರ, ಪುತ್ತೂರು, ದಕ್ಷಿಣ ಕನ್ನಡ-574201 |
| 7 | ಕಾನ್ಸೆಟ್ಟಾ ಆಸ್ಪತ್ರೆ, ದಕ್ಷಿಣ ಕನ್ನಡ | ಖಾಸಗಿ | ಕಾನ್ಸೆಟ್ಟಾ ಆಸ್ಪತ್ರೆ, ಕಿನ್ನಿಗೋಳಿ ಅಂಚೆ, ಮಂಗಳೂರು ತಾಲೂಕು, ದ.ಕ – 574150 |
| 8 | ಫಾದರ್ ಮುಲ್ಲರ್ ಚಾರಿಟಬಲ್ ಸಂಸ್ಥೆ | ಖಾಸಗಿ | ಕಾಲೇಜು ಮತ್ತು ಆಸ್ಪತ್ರೆ, ಈಡಿ. ಮುಲ್ಲರ್ ರಸ್ತೆ, ಕಂಕನಾಡಿ, ಮಂಗಳೂರು-575002 ದ.ಕ |
| 9 | ಫಾದರ್ ಮುಲ್ಲರ್ ಆಸ್ಪತ್ರೆ, ತುಂಬೆ | ಖಾಸಗಿ | ಫಾದರ್ ಮುಲ್ಲರ್ ಆಸ್ಪತ್ರೆ, ತುಂಬೆ, ಕಂಕನಾಡಿ ಅಂಚೆ, ಮಂಗಳೂರು – 575002 |
| 10 | Fr.LM ಪಿಂಟೋ ಆಸ್ಪತ್ರೆ | ಖಾಸಗಿ | ಬದ್ಯಾರ್ ಪಡಂಗಡಿ ಪೊ, ಬೆಳ್ತಂಗಡಿ ಖಿಡ, ದಕ್ಷಿಣ ಕನ್ನಡ |
| 11 | ಗ್ಲೋಬಲ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ | ಖಾಸಗಿ | ಗ್ಲೋಬಲ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, 3ನೇ ಕ್ರಾಸ್, ಮತಡ್ಕಣಿ, ಉರ್ವಾ, ಮಂಗಳೂರು – 575001 |
| 12 | ಇಂಡಿಯಾನಾ ಆಸ್ಪತ್ರೆ ಮತ್ತು ಹೃದಯ | ಖಾಸಗಿ | ಮಹಾವೀರ್ ಸರ್ಕಲ್, ಪಂವೆಲ್, ಕಂಕನಾಡಿ, ಮಂಗಳೂರು – 02 |
| 13 | ಜಸ್ಟೀಸ್ ಕೆ.ಎಸ್. ಹೆಗ್ಡೆ ಚಾರಿಟೇಬಲ್ | ಖಾಸಗಿ | ವಿಶ್ವವಿದ್ಯಾನಿಲಯ ರಸ್ತೆ, ದೇರಳಕಟ್ಟೆ, ಮಂಗಳೂರು - 575008 |
| 14 | ಕೆ.ವಿ.ಜಿ. ವೈದ್ಯಕೀಯ ಕಾಲೇಜು ಮತ್ತು | ಖಾಸಗಿ | ಡಾ. ಚಿದಾನಂದ ಕೆವಿಜಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಸುಳ್ಯ, ಕುರುಂಜಿಬಾಗ್-574327 ದಕ್ಷಿಣ ಕನ್ನಡ |
| 15 | ಕಣಚೂರ್ ಆಸ್ಪತ್ರೆ ಮತ್ತು ಸಂಶೋಧನ | ಖಾಸಗಿ | ವಿಶ್ವವಿದ್ಯಾನಿಲಯ ರಸ್ತೆಯಲ್ಲಿದೆ, ದೇರಳಕಟ್ಟೆ, ಮಂಗಳೂರು – 575008 |
| 16 | ಕೆಎಂಸಿ ಆಸ್ಪತ್ರೆ, ಅತ್ತಾವರ | ಖಾಸಗಿ | ಕೆಎಂಸಿ ಆಸ್ಪತ್ರೆ, ನಂದಿಗುಡ್ಡ ರಸ್ತೆ, ಅತ್ತಾವರ, ಮಂಗಳೂರು- ದ.ಕ |
| 17 | ಕೆಎಂಸಿ ಆಸ್ಪತ್ರೆ, ಜ್ಯೋತಿ | ಖಾಸಗಿ | ಕೆಎಂಸಿ ಆಸ್ಪತ್ರೆ, ಡಾ. ಅಂಬೇಡ್ಕರ್ ವೃತ್ತ, ಮಂಗಳೂರು- ದ.ಕ |
| 18 | ಮಹಾವೀರ್ ಮೆಡಿಕಲ್ ಸೆಂಟರ್ | ಖಾಸಗಿ | "ಮಹಾವೀರ್ ಮೆಡಿಕಲ್ ಸೆಂಟರ್, ಮುಖ್ಯರಸ್ತೆ, ಪುತ್ತೂರು-57420 |
| 19 | ಮಂಗಳಾ ಆಸ್ಪತ್ರೆ | ಖಾಸಗಿ | ಫೌಂಡೇಶನ್, ವಜ್ರ ಹಿಲ್ಸ್, ಕದ್ರಿ ರಸ್ತೆ, ಮಂಗಳೂರು-575003 ಆಎ |
| 20 | ಒಮೆಗಾ ಆಸ್ಪತ್ರೆ | ಖಾಸಗಿ | ಒಮೆಗಾ ಆಸ್ಪತ್ರೆ, ಮಹಾವೀರ ಸರ್ಕಲ್, ಕಂಕನಾಡಿ, ಮಂಗಳೂರು ದ.ಕ |
| 21 | ಪ್ರಸಾದ್ ನೇತ್ರಾಲಯ ದಕ್ಷಿಣ ಕನ್ನಡ | ಖಾಸಗಿ | ಪ್ರಸಾದ್ ನೇತ್ರಾಲಯ, ಶ್ರೀ ಕೃಷ್ಣ ಪ್ರಸಾದ್ ಕಟ್ಟಡ, ಎಂ ಜಿ ರಸ್ತೆ, ಲಾಲ್ಬಾಗ್, ಮಂಗಳೂರು |
| 22 | ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾ | ಖಾಸಗಿ | ಆಸ್ಪತ್ರೆ, ಜನತಾ ಕಾಂಪ್ಲೆಕ್ಸ್, ಗಾಂಧಿನಗರ, ಸುಳ್ಯ – 574239 |

| | | | |
|---|---|---|---|
| 23 | ಪುತ್ತೂರು ಸಿಟಿ ಆಸ್ಪತ್ರೆ | ಖಾಸಗಿ | ಪುತ್ತೂರು ಸಿಟಿ ಆಸ್ಪತ್ರೆ, ಮಾಧವ ಬಾಗ್, ಎಪಿಎಂಸಿ ರಸ್ತೆ, ಪುತ್ತೂರು, ಡಿಕೆ-574201 |
| 24 | ಪ್ರಗತಿ ಸ್ಪೆಷಾಲಿಟಿ ಆಸ್ಪತ್ರೆ | ಖಾಸಗಿ | ಡಾ. ಶ್ರೀಪತಿ ರಾವ್ ಪ್ರಗತಿ ಸ್ಪೆಷಾಲಿಟಿ ಆಸ್ಪತ್ರೆ ಮುಖ್ಯ ರಸ್ತೆ, ಬೊಳ್ವಾರ್, ಪುತ್ತೂರು-574201 ದ.ಕ. |
| 25 | ಶ್ರೀ ಕೃಷ್ಣ ಆಸ್ಪತ್ರೆ | ಖಾಸಗಿ | ಕಕ್ಕಿಂಜೆ -574228, ಬೆಳತಂಗಡಿ, ಖಿ, ದ.ಕ. ಜಿಲ್ಲೆ |
| 26 | ಶ್ರೀ ಧರ್ಮಶಾಲಾ ಮಂಜುನಾಥೇಶ್ವರ ಆ | ಖಾಸಗಿ | ಕಚೇರಿ ಎದುರು, ಚಾರ್ಮಾಡಿ ರಸ್ತೆ, ಉಜಿರೆ, ಬೆಳ್ತಂಗಡಿ – 574240 |
| 27 | ಸೋಮಯಾಜಿ ಆಸ್ಪತ್ರೆ | ಖಾಸಗಿ | ಆಸ್ಪತ್ರೆ, ಬಿ.ಸಿ ರೋಡ್, ಜೋಡುಮಾರ್ಗ, ಬಂಟ್ವಾಳ-574219 ದ.ಕ. |
| 28 | ಶ್ರೀನಿವಾಸ ವೈದ್ಯಕೀಯ ಕಾಲೇಜು, ಮ | ಖಾಸಗಿ | ಸಂಶೋಧನಾ ಕೇಂದ್ರ, ಮುಕ್ಕ ಗ್ರಾಮ, ಸುರತ್ಕಲ್, ಮುಲ್ಕಿ ತಾಲೂಕು, ಮಂಗಳೂರು-574146 |
| 29 | ವೆನ್ಲಾಕ್ ಆಸ್ಪತ್ರೆ | ಸರ್ಕಾರಿ | ವೈದ್ಯಕೀಯ ಅಧೀಕ್ಷಕರು ವೆನ್ಲಾಕ್ ಲೇಡಿ ಗೋಷೆನ್ ಆಸ್ಪತ್ರೆ, ಮಂಗಳೂರು ದಕ್ಷಿಣ ಕನ್ನಡ |
| 30 | ಯೆನೆಪೋಯ ವೈದ್ಯಕೀಯ ಕಾಲೇಜು ಆ | ಖಾಸಗಿ | ನಿತ್ಯಾನಂದ ನಗರ, ದೇರಳಕಟ್ಟೆ, ಮಂಗಳೂರು-18 |
| 31 | ಯೆನೆಪೋಯ ಸ್ಪೆಷಾಲಿಟಿ ಆಸ್ಪತ್ರೆ | ಖಾಸಗಿ | ಯೆನೆಪೋಯ ಸ್ಪೆಷಾಲಿಟಿ ಆಸ್ಪತ್ರೆ, ಕೊಡಿಯಾಲ್ ಬೈಲ್, ಮಂಗಳೂರು, ದ.ಕ |

| ಜಿಲ್ಲೆ: **ಉಡುಪಿ**: ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳ ಪಟ್ಟಿ (ಹಿಂದಿನ ಯಶಸ್ವಿನಿ ಯೋಜನೆ) | | | |
|---|---|---|---|
| ಕ್ರಸಂ | ಆಸ್ಪತ್ರೆಗಳ ಹೆಸರು | ಸರ್ಕಾರಿ/ಖಾಸಗಿ | ವಿಳಾಸ |
| 1 | ಆದರ್ಶ ಆಸ್ಪತ್ರೆ | ಖಾಸಗಿ | ಆದರ್ಶ ಆಸ್ಪತ್ರೆ, ರಾಷ್ಟ್ರೀಯ ಹೆದ್ದಾರಿ 17, ಕುಂದಾಪುರ, ಉಡುಪಿ. |
| 2 | ಆದರ್ಶ ಹಾಸ್ಪಿಟಲ್ ಇನ್ಸ್ಟಿಟ್ಯೂಟ್ ಆಫ್ ಕಾರ್ಡಿಯಾಕ್ ಟ್ರಾಮಾ ಮತ್ತು [illegible] | ಖಾಸಗಿ | ಡಾ. ಜಿ. ಎಸ್. ಚಂದ್ರಶೇಖರ್, ಆದರ್ಶ ಆಸ್ಪತ್ರೆ, ಸರ್ವಿಸ್ ಬಸ್ ನಿಲ್ದಾಣದ ಹತ್ತಿರ, ಉಡುಪಿ-576101. |
| 3 | ಚಿನ್ಮಯ ಆಸ್ಪತ್ರೆ ಕುಂದಾಪುರ | ಖಾಸಗಿ | ಚಿನ್ಮಯ ಆಸ್ಪತ್ರೆ, ಕುಂದಾಪುರ, ಉಡುಪಿ ಜಿಲ್ಲೆ |
| 4 | ಸಿಟಿ ಹಾಸ್ಪಿಟಲ್ & ಡಯಾಗ್ನಿಸ್ಟಿಕ್ ಸೆಂಟರ್ | ಖಾಸಗಿ | ಡಾ. ವಿಶ್ವನಾಥ್ ಶಾನಭಾಗ್ ಸಿಟಿ ಹಾಸ್ಪಿಟಲ್ & ಡಯಾಗ್ನಿಸ್ಟಿಕ್ ಸೆಂಟರ್, ಅಲಂಕಾರ್ ಥಿಯೇಟರ್ ಹಿಂದೆ, [illegible], ಉಡುಪಿ |
| 5 | CSI ಲೊಂಬಾರ್ಡ್ ಸ್ಮಾರಕ ಆಸ್ಪತ್ರೆ | ಖಾಸಗಿ | ನಂ. 5, ಮಿಷನ್ ಕಾಂಪೌಂಡ್, ಉಡುಪಿ-576101 |
| 6 | ಜಿಲ್ಲಾ ಆಸ್ಪತ್ರೆ | ಸರ್ಕಾರಿ | ಜಿಲ್ಲಾ ಆಸ್ಪತ್ರೆ, ಉಡುಪಿ |
| 7 | ಡಾ.ಎನ್.ಆರ್. ಆಚಾರ್ಯ ಸ್ಮಾರಕ ಆಸ್ಪತ್ರೆ | ಖಾಸಗಿ | ಡಾ.ಎನ್.ಆರ್.ಆಚಾರ್ಯ ಸ್ಮಾರಕ ಆಸ್ಪತ್ರೆ, ಕೋಟೇಶ್ವರ-576222, ಕುಂದಾಪುರ ತಾಲೂಕು, ಉಡುಪಿ |
| 8 | ಹೈಟೆಕ್ ಮೆಡಿಕೇರ್ ಆಸ್ಪತ್ರೆ | ಖಾಸಗಿ | ಹೈಟೆಕ್ ಮೆಡಿಕೇರ್ ಆಸ್ಪತ್ರೆ, ರಾಷ್ಟ್ರೀಯ ಹೆದ್ದಾರಿ 17, ಅಂಬಲಪಾಡಿ, ಉಡುಪಿ – 576103 |
| 9 | ಕಸ್ತೂರ್ಬಾ ಆಸ್ಪತ್ರೆ | ಖಾಸಗಿ | ಕಸ್ತೂರ್ಬಾ ಆಸ್ಪತ್ರೆ, ಅಂಚೆ ಪೆಟ್ಟಿಗೆ 7, ಮಣಿಪಾಲ-576104 |
| 10 | ಮಹೇಶ್ ಆಸ್ಪತ್ರೆ | ಖಾಸಗಿ | ಮಹೇಶ್ ಆಸ್ಪತ್ರೆ, ಎನ್.ಹೆಚ್.17, ಬ್ರಹ್ಮಾವರ-576213.ಉಡುಪಿ |
| 11 | ಮಂಜುನಾಥ ನೇತ್ರಾಲಯ | ಖಾಸಗಿ | ಮಂಜುನಾಥ ನೇತ್ರಾಲಯ, ಬನ್ನಂಜ, ಉಡುಪಿ |
| 12 | ಮಿತ್ರ ಆಸ್ಪತ್ರೆ | ಖಾಸಗಿ | ಡಾ. ಶ್ರೀಧರ್ ಹೊಳ್ಳ ಮಿತ್ರ ಆಸ್ಪತ್ರೆ, ಉಡುಪಿ-576101 |
| 13 | ನ್ಯೂ ಸಿಟಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ | ಖಾಸಗಿ | ನ್ಯೂ ಸಿಟಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಎದುರು. ಶನೀಶ್ವರ ದೇವಸ್ಥಾನ, ವಿದ್ಯಾರಣ್ಯ ಮಾರ್ಗ, ಉಡುಪಿ |

| | | | |
|---|---|---|---|
| 14 | ನಿಟ್ಟೆ ಗಜ್ರಿಯಾ ಸ್ಪೆಷಾಲಿಟಿ ಆಸ್ಪತ್ರೆ | ಖಾಸಗಿ | ನಿಟ್ಟೆ ಗಜ್ರಿಯಾ ಸ್ಪೆಷಾಲಿಟಿ ಆಸ್ಪತ್ರೆ, ತಳ್ಳಾರ್ ರಸ್ತೆ, ಕಾರ್ಕಳ ಉಡುಪಿ |
| 15 | ಪಾರ್ವತಿ ಮಹಾಬಲ ಶೆಟ್ಟಿ ಸ್ಮಾರಕ ಕಣ್ಣಿನ ಆಸ್ಪತ್ರೆ | ಖಾಸಗಿ | ಪಾರ್ವತಿ ಮಹಾಬಲ ಶೆಟ್ಟಿ ಸ್ಮಾರಕ ಕಣ್ಣಿನ ಆಸ್ಪತ್ರೆ, 33 ಶಿರೂರು, ಮುದ್ದುಮನೆ ಅಂಚೆ, ಉಡುಪಿ |
| 16 | ಪ್ರಸಾದ್ ನೇತ್ರಾಲಯ | ಖಾಸಗಿ | ಪ್ರಸಾದ್ ನೇತ್ರಾಲಯ ಎ.ಜ ಅಲ್ಸ ರಸ್ತೆ, ಅಲಂಕಾರ್ ಥಿಯೇಟರ್ ಹಿಂಭಾಗ, ಉಡುಪಿ-576101 |
| 17 | ಶ್ರೀ ಮಂಜುನಾಥ ಹಾಸ್ಪಿಟಲ್ | ಖಾಸಗಿ | ಶ್ರೀ ಮಂಜುನಾಥ ಆಸ್ಪತ್ರೆ, ಕುಂದಾಪುರ, ಉಡುಪಿ ಜಿಲ್ಲೆ. |
| 18 | ಸರ್ಜನ್ ಆಸ್ಪತ್ರೆ | ಖಾಸಗಿ | ಕೋಟೇಶ್ವರ-576222, ಕುಂದಾಪುರ ತಾಲೂಕು, ಉಡುಪಿ |
| 19 | ಶ್ರೀ ದೇವಿ ನರ್ಸಿಂಗ್ ಹೋಮ್ | ಖಾಸಗಿ | ಶ್ರೀ ದೇವಿ ನರ್ಸಿಂಗ್ ಹೋಮ್, ಗಾಂಧಿ ಪಾರ್ಕ್ ಎದುರು, ವೋಡರ್ ಹೋಬಳಿ, ಕುಂದಾಪುರ, ಉಡುಪಿ ಜಿಲ್ಲೆ |
| 20 | ಶ್ರೀ ಮಠ ಆಸ್ಪತ್ರೆ | ಖಾಸಗಿ | ಶ್ರೀ ಮಠ ಆಸ್ಪತ್ರೆ ಚರ್ಚ್ ರಸ್ತೆ, ಕುಂದಾಪುರ ತಾಲೂಕು, ಉಡುಪಿ |
| 21 | ಸ್ಪಂದನಾ ಹೆರಿಗೆ ಮತ್ತು ಜನರಲ್ ಆಸ್ಪತ್ರೆ | ಖಾಸಗಿ | ಡಾ. ಎಚ್.ಎನ್. ನಾಗರತ್ನ, ಸ್ಪಂದನ ಹೆರಿಗೆ ಮತ್ತು ಜನರಲ್ ಆಸ್ಪತ್ರೆ, ಮಂಗಳೂರು ರಸ್ತೆ, ಕಾರ್ಕಳ-574104 ಉಡುಪಿ |
| 22 | ವಿನಯಾ ಆಸ್ಪತ್ರೆ | ಖಾಸಗಿ | ವಿನಯ ಆಸ್ಪತ್ರೆ, ಮುಖ್ಯರಸ್ತೆ, ಪಾರಿಜಾತ ಕೇಂದ್ರದ ಹತ್ತಿರ, ಕುಂದಾಪುರ-576201 |
| 23 | ವಿವೇಕ್ ಆಸ್ಪತ್ರೆ | ಖಾಸಗಿ | ವಿವೇಕ್ ಆಸ್ಪತ್ರೆಕಲ್, ಕುಂದಾಪುರ ಮುರ್ಕ್ಯ, ವಡೇರ್ ಹೋಬಳಿ, ಕುಂದಾಪುರ |

ಅನುಬಂಧ–2ಬಿ

| ಜಿಲ್ಲೆ: **ದಕ್ಷಿಣ ಕನ್ನಡ** :ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳ ಪಟ್ಟಿ (ಪರಿಷ್ಕೃತ ಯಶಸ್ವಿನಿ ಯೋಜನೆ) | | | |
|---|---|---|---|
| ಕ್ರಸಂ | ಆಸ್ಪತ್ರೆಗಳ ಹೆಸರು | ಸರ್ಕಾರಿ/ಖಾಸಗಿ | ವಿಳಾಸ |
| 1 | ಆಳ್ವಾಸ್ ಆರೋಗ್ಯ ಕೇಂದ್ರ (ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ) | ಖಾಸಗಿ | ISO ಪ್ರಮಾಣೀಕೃತ 9001:2015:QACS-A-AHC-08.16.022), ಮೂಡುಬಿದಿರೆ -574227,(D.K) |
| 2 | ಅಥೇನಾ ಆಸ್ಪತ್ರೆ | ಖಾಸಗಿ | ಫಳ್ನೀರ್ ರಸ್ತೆ, ಮಂಗಳೂರು-575001 |
| 3 | ಬೆನಕ ಆರೋಗ್ಯ ಕೇಂದ್ರ | ಖಾಸಗಿ | ಮುಖ್ಯ ರಸ್ತೆ ಉಜ್ಜಿರೆ, ದ.ಕ |
| 4 | ಕಾನ್ಸೆಟ್ಟಾ ಆಸ್ಪತ್ರೆ, ದಕ್ಷಿಣ ಕನ್ನಡ | ಖಾಸಗಿ | ಕಿನ್ನಿಗೋಳಿ ಅಂಚೆ, ಮಂಗಳೂರು ತಾಲೂಕು, ದ.ಕ - 574150 |
| 5 | ಫಾದರ್ ಮುಲ್ಲರ್ ಚಾರಿಟಬಲ್ ಸಂಸ್ಥೆ | ಖಾಸಗಿ | FR ಮುಲ್ಲರ್ ರಸ್ತೆ, ಕಂಕನಾಡಿ, ಮಂಗಳೂರು-575002 |
| 6 | ಫಾದರ್ ಮುಲ್ಲರ್ ಆಸ್ಪತ್ರೆ, ತುಂಬೆ | ಖಾಸಗಿ | ತುಂಬೆ, ಕಂಕನಾಡಿ ಅಂಚೆ, ಮಂಗಳೂರು – 575002 |
| 7 | Fr LM ಪಿಂಟೋ ಆಸ್ಪತ್ರೆ | ಖಾಸಗಿ | ಬದ್ಯಾರ್ ಪಡಂಗಡಿ(P) , ಬೆಳ್ತಂಗಡಿ Tq, ದಕ್ಷಿಣ ಕನ್ನಡ |
| 8 | ಇಂಡಿಯಾನಾ ಆಸ್ಪತ್ರೆ ಮತ್ತು ಹಾರ್ಟ್ ಸೆಂಟರ್ | ಖಾಸಗಿ | ಮಹಾವೀರ್ ಸರ್ಕಲ್, ಪಂಪೆಲ್, ಕಂಕನಾಡಿ, ಮಂಗಳೂರು - 02 |
| 9 | ಜಸ್ಟೀಸ್ ಕೆ.ಎಸ್. ಹೆಗ್ಡೆ ಚಾರಿಟೇಬಲ್ ಆಸ್ಪತ್ರೆ | ಖಾಸಗಿ | ವಿಶ್ವವಿದ್ಯಾಲಯ ರಸ್ತೆ, ದೇರಳಕಟ್ಟೆ ದ.ಕ. -574160. |
| 10 | ಕಣಚೂರ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ | ಖಾಸಗಿ | ವಿಶ್ವವಿದ್ಯಾನಿಲಯ ರಸ್ತೆ, ದೇರಳಕಟ್ಟೆ, ಮಂಗಳೂರು - 575008 |
| 11 | ಒಮೆಗಾ ಆಸ್ಪತ್ರೆ | ಖಾಸಗಿ | ಮಹಾವೀರ ಸರ್ಕಲ್, ಕಂಕನಾಡಿ, ಮಂಗಳೂರು ದ.ಕ |
| 12 | ಪ್ರಸಾದ್ ನೇತ್ರಾಲಯ ದಕ್ಷಿಣ ಕನ್ನಡ | ಖಾಸಗಿ | ಶ್ರೀ ಕೃಷ್ಣ ಪ್ರಸಾದ್ ಕಟ್ಟಡ, ಎಂ ಜಿ ರಸ್ತೆ, ಲಾಲ್ಬಾಗ್, ಮಂಗಳೂರು |
| 13 | ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ, ಸುಳ್ಯ | ಖಾಸಗಿ | ಜನತಾ ಕಾಂಪ್ಲೆಕ್ಸ್, ಗಾಂಧಿನಗರ, ಸುಳ್ಯ - 574239 |
| 14 | ಸೋಮಯಾಜಿ ಆಸ್ಪತ್ರೆ | ಖಾಸಗಿ | ಬಿ.ಸಿ ರೋಡ್, ಜೋಡುಮಾರ್ಗ, ಬಂಟ್ವಾಳ-574219 |
| 15 | ಶ್ರೀ ಕೃಷ್ಣ ಆಸ್ಪತ್ರೆ | ಖಾಸಗಿ | ಕಕ್ಕಿಂಜೆ -574228, ಬೆಳ್ತಂಗಡಿ, Tq, ದ.ಕ. ಜಿಲ್ಲೆ |
| 16 | ಶ್ರೀನಿವಾಸ ವೈದ್ಯಕೀಯ ಕಾಲೇಜು, ಮುಕ್ಕ ಸುರತ್ಕಲ್ | ಖಾಸಗಿ | ಮುಕ್ಕ ಗ್ರಾಮ, ಸುರತ್ಕಲ್, ಮುಲ್ಕಿ ತಾಲೂಕು, ಮಂಗಳೂರು-574146 |
| 17 | ಯೆನೆಪೋಯ ವೈದ್ಯಕೀಯ ಕಾಲೇಜು ಆಸ್ಪತ್ರೆ | ಖಾಸಗಿ | ನಿತ್ಯಾನಂದ ನಗರ, ದೇರಳಕಟ್ಟೆ, ಮಂಗಳೂರು-18 |
| 18 | ಯೆನೆಪೋಯ ಸ್ಪೆಷಾಲಿಟಿ ಆಸ್ಪತ್ರೆ | ಖಾಸಗಿ | ಯೆನೆಪೋಯ ಸ್ಪೆಷಾಲಿಟಿ ಆಸ್ಪತ್ರೆ, ಕೊಡಿಯಾಲ್ ಬೈಲ್, ಮಂಗಳೂರು, ದ.ಕ |

| ಜಿಲ್ಲೆ: ಉಡುಪಿ:ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳ ಪಟ್ಟಿ (ಪರಿಷ್ಕೃತ ಯಶಸ್ವಿನಿ ಯೋಜನೆ) | | | |
|---|---|---|---|
| 1 | ಆದರ್ಶ ಆಸ್ಪತ್ರೆ | ಖಾಸಗಿ | ರಾಷ್ಟ್ರೀಯ ಹೆದ್ದಾರಿ 17, ಕುಂದಾಪುರ, ಉಡುಪಿ. |
| 2 | ಜಿಲ್ಲಾ ಆಸ್ಪತ್ರೆ | ಸರ್ಕಾರಿ | ಜಿಲ್ಲಾ ಆಸ್ಪತ್ರೆ, ಉಡುಪಿ |
| 3 | ಡಾ.ಎನ್.ಆರ್. ಆಚಾರ್ಯ ಮೆಮೋರಿಯಲ್ ಆಸ್ಪತ್ರೆ | ಖಾಸಗಿ | ಕೋಟೇಶ್ವರ, ಕುಂದಾಪುರ ತಾಲೂಕು, ಉಡುಪಿ |
| 4 | ಮಹೇಶ್ ಆಸ್ಪತ್ರೆ | ಖಾಸಗಿ | ಎನ್.ಹೆಚ್.17, ಬ್ರಹ್ಮಾವರ-576213. |
| 5 | ಮಂಜುನಾಥ ನೇತ್ರಾಲಯ | ಖಾಸಗಿ | ಬನ್ನಂಜೆ, ಉಡುಪಿ |
| 6 | ಮಿತ್ರ ಆಸ್ಪತ್ರೆ | ಖಾಸಗಿ | ಉಡುಪಿ-576101 |
| 7 | ನ್ಯೂ ಸಿಟಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ | ಖಾಸಗಿ | ಎದುರು. ಶನೀಶ್ವರ ದೇವಸ್ಥಾನ, ವಿದ್ಯಾರಣ್ಯ ಮಾರ್ಗ, ಉಡುಪಿ |
| 8 | ನಿಟ್ಟೆ ಗಜ್ರಿಯಾ ಸ್ಪೆಷಾಲಿಟಿ ಆಸ್ಪತ್ರೆ | ಖಾಸಗಿ | ತೆಳ್ಳಾರ್ ರಸ್ತೆ, ಕಾರ್ಕಳ ಉಡುಪಿ |
| 9 | ಪಾರ್ವತಿ ಮಹಾಬಲ ಶೆಟ್ಟಿ ಮೆಮೋರಿಯಲ್ ಕಣ್ಣಿನ ಆಸ್ಪತ್ರೆ | ಖಾಸಗಿ | # 33 ಶಿರೂರು, ಮುದ್ದುಮನೆ ಅಂಚೆ, ಉಡುಪಿ |
| 10 | ಪ್ರಸಾದ್ ನೇತ್ರಾಲಯ | ಖಾಸಗಿ | ಎ.ಜೆ ಅಲ್ಸೆ ರಸ್ತೆ, ಅಲಂಕಾರ್ ಥಿಯೇಟರ್ ಹಿಂಭಾಗ, ಉಡುಪಿ-576101 |
| 11 | ಸ್ಪಂದನಾ ಮೆಟರ್ನಟಿ ಮತ್ತು ಜನರಲ್ ಆಸ್ಪತ್ರೆ | ಖಾಸಗಿ | ಮಂಗಳೂರು ರಸ್ತೆ, ಕಾರ್ಕಳ-574104. |
| 12 | ಶ್ರೀ ಮಠ ಆಸ್ಪತ್ರೆ | ಖಾಸಗಿ | ಚರ್ಚ್ ರಸ್ತೆ, ಕುಂದಾಪುರ ತಾಲೂಕು, ಉಡುಪಿ |
| 13 | ಸರ್ಜನ್ ಆಸ್ಪತ್ರೆ | ಖಾಸಗಿ | ಕೋಟೇಶ್ವರ, ಕುಂದಾಪುರ ತಾಲೂಕು, ಉಡುಪಿ |
| 14 | ವಿವೇಕ್ ಆಸ್ಪತ್ರೆ | ಖಾಸಗಿ | ವಡೇರ್ ಹೋಬಳಿ, ಕುಂದಾಪುರ. |